ಸಂಪುಟ: 02/ ಸಂಚಿಕೆ: ೧೬೯/ ಶನಿವಾರ ದಿನಾಂಕ : ೨೩-೦೮-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

■ಬೆಳಗಾವಿ ■ಧಾರವಾಡ ■ಬಾಗಲಕೋಟ ■ವಿಜಯಪುರ ■ಗದಗ ■ಕೊಪ್ಪಳ ■ಹಾವೇರಿ ■ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 07/ ISSUE : 169/ SATURDAY Date : 23-08-2025/ RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

ಕರಾವಳಿ ಭಾಗದಲ್ಲಿ ಉದ್ಯೋಗ ಸೃಷ್ಟಿ, ಪ್ರವಾಸೋದ್ಯಮ ಬೆಳವಣಿಗೆಗೆ ಪ್ರತ್ಯೇಕ ನೀತಿ: ಡಿ.ಕೆ. ಶಿವಕುಮಾರ್

ಬೆಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಸೇರಿದಂತೆ ಕರಾವಳಿ ಭಾಗದಲ್ಲಿ ಉದ್ಯೋಗ ಸೃಷ್ಟಿಗೆ ಹಾಗೂ ಪ್ರವಾಸೋದ್ಯಮ ಬೆಳವಣಿಗೆಗೆ ಪ್ರತ್ಯೇಕ ನೀತಿ ಮಾಡಬೇಕೆಂದು ಆಲೋಚನೆ ಮಾಡಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಶುಕ್ರವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸ್ಪೀಕರ್ ಯು.ಟಿ.ಖಾದರ್, ಸಚಿವರಾದ ದಿನೇಶ್ ಗುಂಡೂರಾವ್, ಎಚ್. ಕೆ.ಪಾಟೀಲ್, ಲಕ್ಷ್ಮಿ ಹೆಬ್ಬಾಳ್ಕರ್ ಸೇರಿದಂತೆ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಎರಡನೇ ಸಭೆಯನ್ನು ಮಂಗಳೂರಿನಲ್ಲಿ ನಡೆಸಲಾಗುವುದು. ಮುಂದಿನ ಸಭೆಗೆ ಯಾರನ್ನು ಆಹ್ವಾನ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಈ ಸಭೆಯಲ್ಲಿ ಬಂಡವಾಳ ಹೂಡಿಕೆದಾರರು, ಕೇಂದ್ರ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಕರೆಯಲಾಗುತ್ತದೆ. ಕರಾವಳಿ ಭಾಗಕ್ಕೆ ಹೊಸರೂಪ ನೀಡಲಾಗುತ್ತದೆ ಎಂದು ತಿಳಿಸಿದರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಸಹಿತ ಕರಾವಳಿ ಭಾಗದ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಸಚಿವರುಗಳ ಜೊತೆ ಮೊಟ್ಟ ಮೊದಲ ಸಭೆ ನಡೆಸಲಾಯಿತು. ಅಧಿಕಾರಿಗಳೂ ಸಭೆಯಲ್ಲಿ ಹಾಜರಿದ್ದರು. ಪರಿಹಾರೋಪಾಯಗಳ ಬಗ್ಗೆ ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಎಂದು ಶಿವಕುಮಾರ್ ನುಡಿದರು.

ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ಅಂಗೀಕಾರ

ಬೆಂಗಳೂರು: "ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ 2025" ಕ್ಕೆ ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ 2025" ನ್ನು ಮಾನ್ಯ ಕಂದಾಯ ಸಚಿವರಾದ ಕೃಷ್ಣ ಭೈರೇಗೌಡ ಅವರು ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಮಾಡುವಂತೆ ಪರ್ಯಾಲೋಚನೆಗೆ ಮಂಡಿಸಿದರು.

ಪ್ರಾಧಿಕಾರದ ಪರಿಮಿತಿಯೊಳಗೆ ಬರುವ ಪ್ರಾದೇಶಿಕ ಮತಕ್ಷೇತ್ರದಲ್ಲಿ ಬಸವನಬಾಗೇವಾಡಿಯನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಪ್ರತಿನಿಧಿಸುವ ಕರ್ನಾಟಕ ರಾಜ್ಯ ವಿಧಾನಪರಿಷತ್ತಿನ ಸದಸ್ಯರನ್ನು ಪದನಿಮಿತ್ತ ಸದಸ್ಯರನ್ನಾಗಿ ಸೇರಿಸಲು ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2024 (2025ರ ಕರ್ನಾಟಕ ಅಧಿನಿಯಮ ಸಂ. 4)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿ ಈ ವಿಧೇಯಕವನ್ನು ತರಲಾಗಿದ್ದು, ವಿಧೇಯಕವನ್ನು ಅಂಗೀಕರಿಸುವಂತೆ ಸದನದಲ್ಲಿ ಕೋರಿದರು. ಮಾನ್ಯ ಸಭಾಪತಿಗಳು ಸದರಿ ವಿಧೇಯಕಕ್ಕೆ ಅಂಗೀಕಾರ ನೀಡಿದರು.

ಐದು ಗ್ಯಾರಂಟಿಗಳಿಂದ ತಲಾ ಆದಾಯದಲ್ಲಿ ಕರ್ನಾಟಕ ನಂಬರ್ ಒನ್: ಮುಖ್ಯಮಂತಿ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಐದು ಚುನಾವಣಾ ಪೂರ್ವ ಭರವಸೆಗಳಿಂದಾಗಿ ತಲಾ ಆದಾಯದಲ್ಲಿ ಕರ್ನಾಟಕ ದೇಶದಲ್ಲಿಯೇ ಅಗ್ರಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಹೇಳಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ, ಐದು ಗ್ಯಾರಂಟಿಗಳಿಗಾಗಿ ಸರ್ಕಾರ 96,000 ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂದು ಸಿಎಂ ತಿಳಿಸಿದರು.

ನಮ್ಮ ಐದು ಗ್ಯಾರಂಟಿಗಳಿಗಾಗಿ ನಾವು ಪ್ರತಿ ವರ್ಷ 52,000 ಕೋಟಿ ರೂ.ಯಿಂದ 55,000 ಕೋಟಿ ರೂ.ಗಳವರೆಗೆ ಖರ್ಚು ಮಾಡಿದ್ದೇವೆ.

ಜುಲೈ ಅಂತ್ಯದವರೆಗೆ, ಒಟ್ಟು 96,000 ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗಾಗಿ ಖರ್ಚು ಮಾಡಿದ್ದೇವೆ(ಮೇ 20, 2023 ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ) ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಹಣ ಇಲ್ಲದಿದ್ದರೆ ಸರ್ಕಾರವು ಇಷ್ಟೊಂದು ಹಣವನ್ನು ಖರ್ಚು ಮಾಡಲು ಹೇಗೆ ಸಾಧ್ಯ? ಎಂದು ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಪ್ರತಿಪಕ್ಷಗಳನ್ನು ಪ್ರಶ್ನಿಸಿದರು.

'ಶಕ್ತಿ' ಯೋಜನೆಯಡಿಯಲ್ಲಿ ಕರ್ನಾಟಕದ ಮಹಿಳೆಯರು 500 ಕೋಟಿಗೂ ಹೆಚ್ಚು ಪ್ರಯಾಣ ಮಾಡಿದ್ದಾರೆ ಎಂದು ಅವರು ಹೇಳಿದರು.

'ರಾಜ್ಯದಲ್ಲಿ ಗ್ಯಾರಂಟಿಗಳಿಂದಾಗಿ ಏನಾಯಿತು ಎಂಬುದು ನಿಮಗೆ ಗೊತ್ತಿದಿದೆಯೇ? ನಾವು

ದೇಶದಲ್ಲಿ ತಲಾ ಆದಾಯದಲ್ಲಿ ನಂಬರ್ ಒನ್ ಆಗಿದ್ದೇವೆ. 2013–14ರಲ್ಲಿ, ತಲಾ ಆದಾಯ 1,01,000 ರೂ.ಗಳಷ್ಟಿತ್ತು. ಆದರೆ ಇಂದು ಅದು 2,04,000 ರೂ.ಗಳಷ್ಟಿದೆ. ಅಭಿವೃದ್ಧಿ ಇಲ್ಲದೆ ಇದು ಸಾಧ್ಯವೇ? ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದೆ ಎಂದು ಆರೋಪಿಸುತ್ತಿರುವ ಪ್ರತಿಪಕ್ಷ ಬಿಜೆಪಿಯನ್ನು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

ಶಕ್ತಿ ಯೋಜನೆ ಜಾರಿಗೆ ತಂದ ನಂತರ ಬೆಂಗಳೂರಿನಲ್ಲಿ ಮಹಿಳೆಯರ ಉದ್ಯೋಗ ದರ ಶೇ. 23 ರಷ್ಟು ಮತ್ತು ಹುಬ್ಬಳ್ಳಿ-ಧಾರವಾಡದಲ್ಲಿ ಶೇ. 21 ರಷ್ಟು ಹೆಚ್ಚಾಗಿದೆ. ಇದನ್ನು ಹೇಳುತ್ತಿರುವುದು ನಾನಲ್ಲ, ಮಾಧ್ಯಮಗಳು ಹೇಳುತ್ತಿವೆ ಎಂದು ಸಿದ್ದರಾಮಯ್ಯ ತಿಳಿಸಿದರು. "ಕರ್ನಾಟಕವು ತಲಾ ಆದಾಯದಲ್ಲಿ ಪ್ರಥಮ ಸ್ಥಾನದಲ್ಲಿರಲು ಕಾರಣವೇನು? ಏಕೆಂದರೆ, ಈ ಗ್ಯಾರಂಟಿಗಳು ಜನರ ಖರೀದಿ ಶಕ್ತಿಯನ್ನು ಹೆಚ್ಚಿಸಿವೆ. ಜನರು ಪ್ರತಿ ತಿಂಗಳು 4,000 ರಿಂದ 5,000 ರೂ. ಪಡೆಯುತ್ತಿದ್ದಾರೆ. ವಾರ್ಷಿಕವಾಗಿ, 50,000 ರಿಂದ 60,000 ರೂ. ಪಡೆಯುತ್ತಿದ್ದಾರೆ. ಇದು ಅಭಿವೃದ್ಧಿಯಲ್ಲವೇ?" ಎಂದು ಅವರು ಪ್ರಶ್ನಿಸಿದರು.

ಇದೇ ವೇಳೆ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅನುದಾನ ಕಡಿತಗೊಳಿಸಿರುವುದನ್ನು ಎತ್ತಿ ತೋರಿಸಿದ ಸಿಎಂ, 14ನೇ ಹಣಕಾಸು ಆಯೋಗದ ಅಡಿಯಲ್ಲಿ ರಾಜ್ಯಕ್ಕೆ ಶೇ. 4.7 ರಷ್ಟು ಅನುದಾನ ಸಿಕ್ಕಿದೆ. ಆದರೆ 15ನೇ ಹಣಕಾಸು ಆಯೋಗದಲ್ಲಿ ಅದು ಶೇ. 3.6 ಕ್ಕೆ ಇಳಿದಿದೆ, ಶೇ. 1 ರಷ್ಟು ಕಡಿತದಿಂದ 68,000 ಕೋಟಿ ನಷ್ಟವಾಗಿದೆ ಎಂದು ಹೇಳಿದರು.

ರಾಜ್ಯವು 68,000 ಕೋಟಿ ರೂ. ಪಡೆದಿದ್ದರೆ, ಮತ್ತಷ್ಟು ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದಿತ್ತು. ಇದಲ್ಲದೆ, ಭದ್ರಾ ಮೇಲ್ದಂಡೆ ನೀರಿನ ಯೋಜನೆಯಡಿಯಲ್ಲಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2023–24 ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದಂತೆ ರಾಜ್ಯಕ್ಕೆ 5,300 ಕೋಟಿ ರೂ.ಗಳನ್ನು ಪಡೆಯಬೇಕಿತ್ತು. ಆದರೆ ಅದು ನಮಗೆ ಸಿಗಲಿಲ್ಲ ಎಂದು ಸಿಎಂ ತಿಳಿಸಿದರು. ಕೇಂದ್ರದ ಹಣ ನಮಗೆ ಸಿಕ್ಕಿದ್ದರೆ, ನೀವು ಕೇಳಿದಷ್ಟು ಹಣವನ್ನು ನಿಮ್ಮ ಕ್ಷೇತ್ರಗಳಿಗೆ ಹಂಚಿಕೆ ಮಾಡಲು ಸಾಧ್ಯವಾಗುತ್ತಿತ್ತು ಎಂದು ಮುಖ್ಯಮಂತ್ರಿಗಳು ಸದನಕ್ಕೆ ತಿಳಿಸಿದರು. ಅವರ ಪ್ರಕಾರ, ಕೇಂದ್ರ ಅನುದಾನದ ಕೊರತೆ ಮತ್ತು ತೆರಿಗೆ ಹಂಚಿಕೆಯಲ್ಲಿ ಕಡಿತದ ಹೊರತಾಗಿಯೂ, ರಾಜ್ಯವು ಈ ಹಣಕಾಸು ವರ್ಷದಲ್ಲಿ ಸುಮಾರು 4,09,000 ಕೋಟಿ ರೂ.ಗಳ ಬಜೆಟ್ ಮಂಡಿಸಿತು.

ಅಕ್ರಮ ಗಣಿಗಾರಿಕೆ

ಜಪ್ತಿ ವಸೂಲಿ ಆಯುಕ್ತರನ್ನು ನೇಮಿಸುವ ವಿಧೇಯಕಕ್ಕೆ ಅನುಮೋದನೆ

ಬೆಂಗಳೂರು: ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದು ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಸಂಬಂಧಪಟ್ಟ ವಿಧೇಯಕ ಅನುಮೋದನೆಗೊಂಡಿತು.

ಗುರುವಾರ ವಿಧಾನಸಭೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ವಿಧೇಯಕವನ್ನು ಮಂಡಿಸಿದರು.

ಬಳಿಕ ವಿವರಣೆ ನೀಡಿದ ಸಚಿವರು, ಕಾನೂನು ಬಾಹಿರ ಸಂಪಾದಿಸಿದ ಆಸ್ತಿಯನ್ನು ಜಪ್ತಿ ಮಾಡುವ ನಿಟ್ಟಿನಲ್ಲಿ ಈ ವಿಧೇಯಕ ತರಲಾಗಿದೆ. ಆಸ್ತಿಗಳನ್ನು ವಸೂಲಿ ಮಾಡಲು ಆಯುಕ್ತರ ಅವಶ್ಯಕತೆಯೂ ಇದೆ ಎಂದು ಹೇಳಿದರು.

ಈ ವೇಳೆ ಬಿಜೆಪಿ ಸದಸ್ಯ ಸಿ.ಸಿ.ಪಾಟೀಲ್, ಬಿಜೆಪಿ ಉಚ್ಚಾಟಿತ ಸದಸ್ಯ ಎಸ್.ಟಿ.ಸೋಮಶೇಖರ್ ಸೇರಿ ಇನ್ನಿತರೆ ಸದಸ್ಯರು ವಿಧೇಯಕ ಕುರಿತು ಮಾತನಾಡಿದರು. ಬಳಿಕ ಸ್ಪೀಕರ್ ಯು.ಟಿ.ಖಾದರ್ ಅವರು ಧ್ವನಿಮತದ ಮೂಲಕ ಈ ವಿಧೇಯಕ ಅಂಗೀಕರಿಸಲಾಗಿದೆ ಎಂದು ಪ್ರಕಟಿಸಿದರು.

ಮತ್ತೊಂದು ವಿಧೇಯಕ: ಇಂದನ ಸಚಿವ ಕೆ.ಜೆ. ಜಾರ್ಜ್ ಅವರು ಮಂಡಿಸಿದ 2025ನೆ ಸಾಲಿನ ಕರ್ನಾಟಕ ಲಿಫ್ಟ್, ಎಸ್ಕಲೇಟರ್ ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್ಗಳ(ತಿದ್ದುಪಡಿ) ವಿಧೇಯಕವನ್ನು ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

ನಡುಗಡ್ಡೆಯಾದ ನಂದಗಾಂವ, ನೀರಲ್ಲಿ ನಿಂತ ಢವಳೇಶ್ವರ ಲಕ್ಷ್ಮೀ ಗುಡಿ

ಮಹಾಲಿಂಗಪುರ : ಸಮೀಪದ ಘಟಪ್ರಭ ನದಿ ಉಕ್ಕಿ ಹರಿಯುತ್ತಿರುವುದರಿಂದ ಪ್ರವಾಹದ ನೀರು ಹಳೇ ನಂದಗಾಂವ್ ಗ್ರಾಮವನ್ನು ಸುತ್ತುವರೆದಿದ್ದರಿಂದ ಊರು ನಡುಗಡ್ಡೆಯಾದಂತಾಗಿದೆ. ಹೊಸ ನಂದಗಾಂವ್ ಗೆ ಸಾಗಬೇಕಾದರೆ ಮೊಳಕಾಲ ತನಕ ನೀರಲ್ಲಿ ಸಾಗಬೇಕಾಗಿದೆ. ಹಳೇ ನಂದಗಾಂವ ಗ್ರಾಮದಲ್ಲಿ ಅಂದಾಜು 49 ಕುಟುಂಬಗಳಿವೆ. ಆ ಪೈಕಿ ಕೇವ 4 ಕುಟುಂಬಗಳು ಮಾತ್ರ ಹೊಸ ನಂದಗಾಂವ ಗೆ ಸ್ಥಳಾಂತರಗೊಂಡಿವೆ. ಉಳಿದವರಲ್ಲಿ ಕೆಲವರು ಜಾನುವಾರುಗಳನ್ನು ಮಾತ್ರ ಬೇರೆ ಕಡೆ ಸಾಗಿಸಿದ್ದಾರೆ. ಉಳಿದವರು ಇನ್ನೂ ನೀರು ಸರಿಯಬಹುದು ಎಂಬ ನಿರೀಕ್ಷೆಯಲ್ಲೇ ಕಾಯುತ್ತಿದ್ದಾರೆ. ಆದರೆ ನದಿ ನೀರು ಊರನ್ನು ಸುತ್ತುವರೆದಿದ್ದರಿಂದ ನೀರು ಒಂಚೂರು ಚೂರು ಹೆಚ್ಚಾದರೂ ಸ್ಥಳಾಂತರಗೊಳ್ಳಲು ಬೋಟನ್ನೇ ಬಳಸಬೇಕಾಗುತ್ತದೆ. ಆಗ ಅವಸರದಲ್ಲಿ ಅವಘಡವಾಗಬಹುದು.

ಢವಳೇಶ್ವರ ಲಕ್ಷ್ಮೀ ಗುಡಿ ನೀರಲ್ಲಿ: ಘಟಪ್ರಭ ತೀರದ ಢವಳೇಶ್ವರ ಗ್ರಾಮಕ್ಕೂ ಪ್ರವಾಹದ ನೀರು ಬಾಧಿಸುತ್ತಿದೆ. ಊರಾಚೆಗಿನ ನದಿ ತೀರದಲ್ಲಿರುವ ಲಕ್ಷ್ಮೀ ದೇವರ ಗುಡಿ ನೀಲ್ಲೇ ನಿಂತಿದೆ. ದುರ್ಗಾದೇವಿ ಗುಡಿ ಕೂಡ ನೀರಲ್ಲಿದೆ. ಊರಲ್ಲಿರುವ ರಿಂಗ್ ರೋಡ್ ಕ್ರಾಸ್ ಮಾಡಿ ನೀರು ಊರ ಕಡೆ ಸರಿಯುತ್ತಿದೆ. ಊರ ಹೊರವಲಯದ ಕೆಲವು ಶೆಡ್‌ಗಳಿಗೆ ನೀರು ನುಗ್ಗಿದ್ದನ್ನು ಬಿಟ್ಟರೆ ಯಾವುದೇ ಹಾನಿಯಾಗಿಲ್ಲ, ನದಿಗೆ 80 ಸಾವಿರ ಕ್ಯೂಸೆಕ್ಸ್ ನೀರು ಹರಿದಾಗ ಮಾತ್ರ ಊರೊಳಗೆ ನೀರು ಬರುತ್ತದೆ ಎಂಬ ತರ್ಕದ ಮೇಲೆ ಊರ ಜನ ಸಧ್ಯಕ್ಕೆ ನಿರಾಳವಾಗಿದ್ದಾರೆ.

ಕುರಿಗಾಹಿಗಳ ದೌರ್ಜನ್ಯಗಳ ವಿರುದ್ಧ ರಕ್ಷಣೆ ವಿಧೇಯಕ ಅಂಗೀಕಾರ

ಬೆಂಗಳೂರು: "ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ 2025" ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ"ವನ್ನು ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರಾದ ಕೆ. ವೆಂಕಟೇಶ್ ಅವರು ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಮಾಡುವಂತೆ ಪರ್ಯಾಲೋಚನೆಗೆ ಮಂಡಿಸಿದರು.

2024–25ರ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಯನ್ನು ಜಾರಿಗೊಳಿಸಲು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ನೋಂದಣಿ ಮತ್ತು ಗುರುತಿಸುವಿಕೆಗಾಗಿ ಹಾಗೂ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಪ್ರಯೋಜನಕ್ಕಾಗಿ ಸ್ಕೀಮುಗಳನ್ನು ಅನುಷ್ಠಾನಗೊಳಿಸಲು ಕ್ಷೇಮಾಭಿವೃದ್ಧಿ ಮಂಡಲಿಯ ಮೂಲಕ ನಿರ್ವಹಿಸಬೇಕಾದ ನಿಧಿಯನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಶಾಸನವೊಂದನ್ನು ಅಧಿನಿಯಮಿತಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಮುಂದುವರೆದು ಕ್ಷೇಮಾಭಿವೃದ್ಧಿ ನಿಧಿಗೆ ಹಣಕಾಸು ಒದಗಿಸಲು ಮಾರುಕಟ್ಟೆ ಶುಲ್ಕವನ್ನು ವಿಧಿಸುವುದು ಯುಕ್ತವೆಂದು ಪರಿಗಣಿಸಲಾಗಿದೆ ಎಂದು ತಿಳಿಸಿ ವಿಧೇಯಕಕ್ಕೆ ಅಂಗೀಕಾರ ನೀಡುವಂತೆ ಸದನದಲ್ಲಿ ಮಾನ್ಯ ಸಚಿವರು ಕೋರಿದರು.

ಪರಿಷತ್ ಸದಸ್ಯರುಗಳಾದ ಡಿ.ಟಿ. ಶ್ರೀನಿವಾಸ್, ಶಾಂತರಾಮ್ ಬುಡ್ನ ಸಿದ್ದಿ, ಡಾ. ಉಮಾಶ್ರೀ, ಹೆಚ್. ವಿಶ್ವನಾಥ್, ಡಾ. ತಿಮ್ಮಯ್ಯ, ಎಂ. ನಾಗರಾಜು, ಪಿ.ಹೆಚ್. ಪೂಜಾರ್, ಛಲವಾದಿ ಟಿ. ನಾರಾಯಣಸ್ವಾಮಿ, ಗೋವಿಂದರಾಜು ಅವರುಗಳ ಸ್ಪಷ್ಟನೆಗಳಿಗೆ ಉತ್ತರಿಸಿದ ಸಚಿವರು ವಿಧೇಯಕವನ್ನು ಅಂಗೀಕಾರಕ್ಕಾಗಿ ಮಂಡಿಸಿದರು. ನಂತರ ಮಾನ್ಯ ಸಭಾಪತಿಗಳಿಂದ "ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ 2025"ಕ್ಕೆ ಅಂಗೀಕಾರ ದೊರೆಯಿತು.

ಮುಂದುವರೆದ ಕೃಷ್ಣೆಯ ರುದ್ರನರ್ತನ

ತಮದಡ್ಡಿಯಲ್ಲಿ ಮನೆಗಳಿಗೆ ಹಳಿಂಗಳಯಲ್ಲಿ ಜಮೀನುಗಳಿಗೆ ನುಗ್ಗಿದ ನೀರು!

ತೇರದಾಳ–ಮಹಾರಾಷ್ಟ್ರದ ಪಶ್ಚಿಮ ಘಟ್ಟ ಸೇರಿದಂತೆ ಎಲ್ಲೆಡೆ ಸುರಿದ ಮಳೆಯಿಂದಾಗಿ ನಾನಾ ಜಲಾಶಯಗಳಿಂದ ಜಿಲ್ಲೆಯ ಜೀವನಾಡಿ ಕೃಷ್ಣಾ ನದಿಗೆ ಹರಿದು ಬರುತ್ತಿರುವ ನೀರಿನ ಮಟ್ಟ ಶುಕ್ರವಾರ ಮತ್ತಷ್ಟು ಹೆಚ್ಚಳಗೊಂಡಿದ್ದು, 2.5 ಲಕ್ಷ ಕ್ಯೂಸೆಕ್ಸ್‌ದಷ್ಟು ಒಳ ಹರಿವು ಹೆಚ್ಚಳಗೊಂಡಿದ್ದು, ಅಷ್ಟೇ ಪ್ರಮಾಣದಲ್ಲಿ ಹಿಪ್ಪರಗಿ ಜಲಾಶಯದಿಂದ ಆಲಮಟ್ಟಿ ಜಲಾಶಯಕ್ಕೆ ಬಿಡಲಾಗುತ್ತಿದೆ.

ಕುಟುಂಬಗಳು ಸ್ಥಳಾಂತರ–ಜಿಲ್ಲೆ ಪ್ರವೇಶ ಮಾಡುವ ಮುಳುಗಡೆ ತಮದಡ್ಡಿ ಗ್ರಾಮದ ಕೃಷ್ಣಾ ನದಿಯಲ್ಲಿ ಮತ್ತೆ ನಾಲ್ಕು ಅಡಿಯಷ್ಟು ನೀರು ಹೆಚ್ಚಳಗೊಂಡಿದ್ದರಿಂದ ಗ್ರಾಮದ ಚನಾಳ ತೋಟದ ವಸತಿ ಮನೆಗಳಿಗೆ ನೀರು ನುಗ್ಗಿದ್ದು, ನೀರು ಬಂದಿರುವ ಕುಟುಂಬಗಳನ್ನು ಸರಕಾರಿ ಶಾಲೆಯ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸುವಲ್ಲಿ ಅಧಿಕಾರಿಗಳು ತೊಡಗಿದ್ದಾರೆ. ಇನ್ನೂ ಕುಟುಂಬಗಳು ನಾವು ಅಷ್ಟೇ ಕಾಳಜಿ ಕೇಂದ್ರಕ್ಕೆ ಹೋದರೆ ನಮ್ಮ ಜಾನುವಾರಗಳ ಗತಿ ಏನು. ನಾವು ಜಾನುವಾರಗಳೊಂದಿಗೆ ರಸ್ತೆ ಬದಿಗೆ ಇರುತ್ತೇವೆ. ಊಟಕ್ಕೆ ಬೇಕಾದರೆ ಕೇಂದ್ರಕ್ಕೆ ಬರುತ್ತೇವೆ ಎಂದು ಸಂತ್ರಸ್ತರು ಹೇಳಿದ್ದಾರೆ. ಪಶು ವೈದ್ಯಾಧಿಕಾರಿಗಳು ಜಾನುವಾರಗಳ ಸರ್ವೇ ಕಾರ್ಯದಲ್ಲಿ ತೊಡಗಿದ್ದು ಮೇವು ವಿತರಣೆಗೆ ಕ್ರಮ ಕೈಗೊಳ್ಳುತ್ತಿದ್ದಾರೆ. ಇನ್ನೇನು ನೀರು ಹೆಚ್ಚಳ ಆಗುವುದಿಲ್ಲ ಎಂಬ ನಂಬಿಕೆಯಲ್ಲಿದ್ದ ರೈತರ ಪಂಪಸೆಟ್‌ಗಳು ನೀರಲ್ಲಿ ಮುಳಗಿದ್ದು, ನೀರಿನಿಂದ ಪಂಪಸೆಟ್‌ಗಳನ್ನು ತಗೆಯುವುದರಲ್ಲಿ

ಮಹಿಳೆಯರಿಗೆ ಸಂಸ್ಕಾರ,ಸಬಲೀಕರಣ, ಸ್ವಾವಲಂಬಿ ಜೀವನ ಕಲಿಸುವ ಧರ್ಮಸ್ಥಳ ಯೋಜನೆ

ಅಂಕಲಗಿ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಸಾಮೂಹಿಕ ವರಮಹಾಲಕ್ಷ್ಮಿ ಪೂಜಾ ಸಮಿತಿ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಅಂಕಲಗಿ ವಲಯ, ಶ್ರೀ ಜಡಿ ಸಿದ್ದೇಶ್ವರ ಮಠ ಸುಲದಾಳ ಇವರ ಸಂಯುಕ್ತ ಆಶ್ರಯದಲ್ಲಿ ಸಮೀಪದ ಸುಲಧಾಳ ಗ್ರಾಮದಲ್ಲಿ ಸಾಮೂಹಿಕ ವರಮಹಾಲಕ್ಷ್ಮಿ ಪೂಜೆ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಗೌಡಪ್ಪ ಹೊಳೆಯಾಚಿ ಉದ್ಘಾಟನೆಯನ್ನು ನೆರವೇರಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಸುಲದಾಳ ಗ್ರಾಮದ ಜಡಿಸಿದ್ದೇಶ್ವರ ಮಠದ ಶ್ರೀ ರುದ್ರಯ್ಯ ಮಹಾಸ್ವಾಮಿಗಳು ಮಾತನಾಡಿ ಮಹಿಳೆಯರಲ್ಲಿ ಇರಬೇಕಾದ ಸಂಸ್ಕಾರ ಮತ್ತು ಶ್ರಾವಣ ಮಾಸದ ವಿಶೇಷತೆ ,ಮಹಿಳೆಯರು ಇವತ್ತು ಸಬಲೆಯಾಗಿ ಪ್ರತಿಯೊಂದು ವಿಚಾರದಲ್ಲಿ ಗುರುತಿಸಲ್ಪಡುವ ಸಾಧನೆಯನ್ನು ಮಾಡುತ್ತಿದ್ದಾರೆ, ಮಹಿಳೆಯರ ಸಬಲೀಕರಣದ ಬಗ್ಗೆ ತಿಳಿಸಿ ಆಶೀರ್ವಚನ ನೀಡಿದರು.

ಅಂಕಲಗಿ ಅಡವಿ ಸಿದ್ದೇಶ್ವರ ಪಿಯು ಕಾಲೇಜು ಪ್ರಾಚಾರ್ಯರಾದಶ್ರೀಮತಿ ಇಂದಿರಾ ಸೋಮನ್ ಗೌಡ ಪಾಟೀಲ ಮಾತನಾಡಿ ವರಮಹಾಲಕ್ಷ್ಮಿ ಪೂಜೆ ಅಂಗವಾಗಿ ಮಹಿಳೆಯರಲ್ಲಿ ಪೂಜೆಯ ಮಹತ್ವ ಧಾರ್ಮಿಕತೆ ಕುರಿತು ಮಾತನಾಡಿದರು.

ಮುಖ್ಯ ಅತಿಥಿಗಳಾದ ಜಿಲ್ಲಾ ನಿರ್ದೇಶಕರು ಹೆಚ್ .ಆರ್ ಲವಕುಮಾರ ಮಾತನಾಡಿ ಸಾಮೂಹಿಕ ಕಾರ್ಯಕ್ರಮದ ಮಹತ್ವ ಹಾಗೂ ಯೋಜನೆಯ ವಿವಿಧ ಸಮಾಜಮುಖಿ ಕಾರ್ಯಕ್ರಮಗಳ ಬಗ್ಗೆ ಬ್ಯಾಂಕಿನಿಂದ ನೀಡುವ ಆರ್ಥಿಕ ನೆರವಿನ ಬಗ್ಗೆ ಮಾಹಿತಿ ನೀಡಿದರು.

ಕನ್ನಡ ರಕ್ಷಣಾ ವೇದಿಕೆ ಉತ್ತರ ಕರ್ನಾಟಕ ರಾಜ್ಯಾಧ್ಯಕ್ಷರು ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿಗಳಾದ ಡಾ. ಬಸವರಾಜ್ (ಅಜ್ಜು) ಪಂಜಾನಟ್ಟಿ ಮಾತನಾಡಿ ಮಹಿಳೆಯರು ಸಾಲವನ್ನು ಪಡೆದುಕೊಂಡು ಸಾಕಷ್ಟು ಸುಧಾರಣೆ ಹೊಂದಿ ಆರ್ಥಿಕವಾಗಿ ಸುಧಾರಣೆಯಾಗಿರುತ್ತಾರೆ ,ಎಲ್ಲರಲ್ಲೂ ವ್ಯವಹಾರ ಧ್ಯಾನ ಬೆಳೆಸಿಕೊಂಡು ಈ ಸಂಘದ ಸದುಪಯೋಗವನ್ನು ಮಾಡಿಕೊಳ್ಳಬೇಕು ಎಂದು ಹೇಳಿದರು.

ಸಾಮೂಹಿಕ ವರಮಹಾಲಕ್ಷ್ಮಿ ಪೂಜಾ ಸಮಿತಿಯ ಅಧ್ಯಕ್ಷರಾದ ಮಾರುತಿ ಗೋಡಲ್ ಕುಂದ್ರಿ ಮಾತನಾಡಿ ಧರ್ಮಸ್ಥಳ ಸಂಘದಿಂದ ಸಾಕಷ್ಟು ಜನರಲ್ಲಿ ಉತ್ತಮ ಅಭಿವೃದ್ಧಿ ಹೊಂದಿರುತ್ತಾರೆ. ಎಷ್ಟೋ ಬಡ ಮಕ್ಕಳು ಶಿಕ್ಷಣದಿಂದ ಸುಜ್ಞಾನ ನಿಧಿ ಪಡೆದುಕೊಳ್ಳುತ್ತಿದ್ದಾರೆ, ಸಾವಿರ ಸಾವಿರ ಕತ್ತಲೆ ತುಂಬಿದ ಕುಟುಂಬಗಳಿಗೆ ಬೆಳಕು ನೀಡಿದ ಸಂಸ್ಥೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಎಂದು ಹೇಳಿದರು.

ಸುಜ್ಞಾನ ನಿಧಿ ಆರೋಗ್ಯ ರಕ್ಷಾ ಪಿ ಆರ್ ಕೆ ಮಂಜೂರಾತಿ ಪತ್ರಗಳನ್ನು ಗಣ್ಯರಿಂದ ವಿತರಣೆ ಮಾಡಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷ ಮಹಾಂತೇಶ ಬೀಜಗತ್ತಿ, ಸ್ವಾಗತವನ್ನು ತಾಲೂಕಾ ಅಧಿಕಾರಿಗಳಾದ ರೋಹಿತ್ ಎಚ್ ಎಚ ನೆರವೇರಿಸಿದರು. ವರದಿ ಮಂಡನೆಯನ್ನು ವಲಯ ಮೇಲ್ವಿಚಾರಕರಾದ ಶ್ರೀಮತಿ ರೇಣುಕಾ ಹಿರೇಮಠ ನೆರವೇರಿಸಿದರು ಸಾಮೂಹಿಕ ಪೂಜಾ ಸಮಿತಿ ಸದಸ್ಯರು,ಅಧ್ಯಕ್ಷರು ,ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಕೋಶಾಧಿಕಾರಿಗಳು ಸರ್ವ ಸದಸ್ಯರುಗಳು ಉಪಸ್ಥಿತರಿದ್ದರು. ಒಕ್ಕೂಟದ ಪದಾಧಿಕಾರಿಗಳು, ಶೌರ್ಯವಿಪ್ಪತ್ತು ಘಟಕದವರು, ಸೇವಾ ಪ್ರತಿನಿಧಿಗಳು, ಸಂಘದ ಸದಸ್ಯರು, ಸುಮಾರು 800 ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದರು. ಗ್ರಾಮ ಪಂಚಾಯತ ಅಧ್ಯಕ್ಷ ಮಹಾಂತೇಶ ಬೀಜಗತ್ತಿ, ಸ್ವಾಗತವನ್ನು ತಾಲೂಕಾ ಅಧಿಕಾರಿಗಳಾದ ರೋಹಿತ್ ಎಚ್ ಎಚ, ವರದಿ ಮಂಡನೆಯನ್ನು ವಲಯ ಮೇಲ್ವಿಚಾರಕರಾದ ಶ್ರೀಮತಿ ರೇಣುಕಾ ಹಿರೇಮಠ ನೆರವೇರಿಸಿದರು.

ಉದ್ಯಮಿ ಜಯಶೀಲ ಶೆಟ್ಟಿ ಅವರಿಗೆ ಸನ್ಮಾನ

ಫಟಪ್ರಭಾ. ಇಲ್ಲಿನ ಖ್ಯಾತ ಉದ್ದಿಮೆದಾರರಾದ ಜಯಶೀಲ ಶೆಟ್ಟಿ ಅವರನ್ನು ಶ್ರೀ ವಿಠ್ಠಲ ಮಂದಿರ ಕಮಿಟಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕೆ ಆರ್ ಎಚ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ರಾಮಣ್ಣ ಹುಕ್ಕೇರಿ, ಗುರುಬಸಯ್ಯ ಕರ್ಪುರಮಠ, ರಮೇಶ ಕಬಾಡಗಿ, ಚಂದ್ರು ಕಬ್ಬುರ, ನಿವೃತ್ತ ಪಿ ಎಸ್ ಐ ಚನ್ನಬಸಪ್ಪ ಕರಬನ್ನವರ ಸೇರಿದಂತೆ ಅನೇಕರು ಇದ್ದರು.

ಮಕ್ಕಳು ಓದಿನ ಜೊತೆಗೆ ಕ್ರೀಡೆಗಳಲ್ಲೂ ಪ್ರತಿಯೊಂದು ವಿದ್ಯಾರ್ಥಿಗಳು ಭಾಗವಹಿಸಬೇಕು

ಮುದ್ದೇಬಿಹಾಳ : ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಯಲ್ಲಿ ಕ್ರೀಡೆಗಳು ಮಹತ್ವದ ಪಾತ್ರ ವಹಿಸುತ್ತದೆ ಎಂದು ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಿ ಮಾತನಾಡಿದ

ದೈಹಿಕ ಶಿಕ್ಷಣಾಧಿಕಾರಿ ಬಿ.ವಾಯ್ ಕವಡಿ,ಶಿಕ್ಷಣ ಸಂಯೋಜಕ ಎ ಬಿ ಬಗಲಿ ಹೇಳಿದರು.

ಜಿಲ್ಲಾ ಪಂಚಾಯತ ವಿಜಯಪುರ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾಗಳ ಕಾರ್ಯಾಲಯ ಮುದ್ದೇಬಿಹಾಳ ಹಾಗೂ 2025–26 ನೇ ಸಾಲಿನ ಅಡವಿ ಸೋಮನಾಳ ಕ್ಲಸ್ಟರ್ ಮಟ್ಟದ ಕ್ರೀಡಾಕೂಟವು ತಾಲ್ಲೂಕಿನ ಚವನಭಾವಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ (ಜಿ ಎಂಪಿ ಎಸ್) ಕಾರ್ಯಕ್ರಮ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

ಅವರು ಮಾತನಾಡಿದ ಕ್ರೀಡೆಯಿಂದ ದೈಹಿಕವಾಗಿ ಗಟ್ಟಿಯಾಗಿ ಆರೋಗ್ಯವಂತರಿದ್ದರೆ ಮಾತ್ರ ಉತ್ತಮ ಶಿಕ್ಷಣ, ಇತರೆ ಕೆಲಸಗಳನ್ನು ಮಾಡಲು ಸಾಧ್ಯವಿದೆ. ಆದ್ದರಿಂದ ಮಕ್ಕಳು ಓದಿನ ಜೊತೆಗೆ ಕ್ರೀಡೆಗಳಲ್ಲೂ ಹಚ್ಚಿನ ಸಂಖ್ಯೆ ಭಾಗವಹಿಸಬೇಕು ಸೋಲು ಗೆಲುವು ಮುಖ್ಯವಲ್ಲ ಕ್ರೀಡೆಯಲ್ಲಿ ಭಾಗವಹಿಸಿ ಕ್ರೀಡಾಕೂಟದಲ್ಲಿ ಸಾಧನೆ ಮುಖ್ಯವಾಗಿದ್ದು ಎಂದರು.

ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರ ಸಂಘದ ಸಂಘದ ಅಧ್ಯಕ್ಷ ಬಿ ಹೆಚ್ ಮುದ್ನೂರು,

ಕಾರ್ಯದರ್ಶಿ ಎನ್ ಎಸ್ ತುರಡಗಿ, ಕ್ರೀಡೆಯಲ್ಲಿ ಪ್ರತಿಯೊಬ್ಬರ ಕ್ರೀಡೆ ಭಾಗವಹಿಸಿ ಸೋಲು ಗೆಲುವು ಮುಖ್ಯವಲ್ಲ ಆದರೆ ಕ್ರೀಡೆಯಿಂದ ದೈಹಿಕ ಮಾನಸಿಕ ಬೆಳವಣಿಗೆಯಾಗುತ್ತೇದೆ ಎಂದರು.

ಕ್ರೀಡಾಕೂಟದ ಕುರಿತು ಶಿಕ್ಷಕ ಎಂ ಎಸ್ ಗುಡಗುಂಟಿ ಅವರು ಮಾತನಾಡಿದರು.

ಬಿಆರ್ ಸಿ,ಎಸ್ ಎಸ್ ಬಾವಿಕಟ್ಟಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು.

ಶಾಲೆಯ ಮುಖ್ಯೋಪಾಧ್ಯಾಕ ಎಸ್ ಎಂ ಜೋಗಿನ ಅಧ್ಯಕ್ಷತೆ ಮಾತನಾಡಿದರು.

ಇದಕ್ಕೂ ಮುನ್ನ ಕ್ರೀಡೆಯ ಪ್ರತಿಜ್ಞೆ ಬೋಧನೆಯನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಮಾಜಿ ಗ್ರಾಪಂ ಅಧ್ಯಕ್ಷ ಹಣಮಂತ ನಾಲತವಾಡ,ಅಂಬ್ರಯ್ಯ ಮಠ,ಪತ್ರಕರ್ತ ಬಸವರಾಜ ಕುಂಬಾರ,ಭರಮಣ್ಣ ಹಂಚಿನಾಳ,ಯಲ್ಲಪ್ಪ ಕಾರಕೂರ,ಅಂಬರೀಶ್ ನಾಲತವಾಡ,ವಿರೇಶ ಚಲವಾದಿ,ಹುಸನಪ್ಪ ಗೋಗಿ, ಗ್ರಾಪಂ ಸಿಬ್ಬಂದಿಗಳಾದ ಬಲವಂತ ಜೋಗಿನ,ಬಸವರಾಜ ಬಿರಾದಾರ,ಗುಡಗುಂಟಿ, ಕ್ರೀಡಾಕೂಟಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ,ಖಾಸಗಿ ಶಾಲೆಯ ಶಿಕ್ಷಕರು, ಅಡವಿ ಸೋಮನಾಳ ಕ್ಲಸ್ಟರ್ ವ್ಯಾಪ್ತಿಯಲ್ಲಿ ಬರುವ ಮುಖ್ಯಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು,ಚವನಭಾವಿ ಗ್ರಾಮದ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

***

ಆ. 24 ರಂದು ಉಸ್ತುವಾರಿ ಸಚಿವ

ಸಂತೋಷ ಲಾಡ್ ಅವರ ಜಿಲ್ಲಾ ಪ್ರವಾಸ

ಧಾರವಾಡ : ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಎಸ್. ಲಾಡ್ ಅವರು ಆಗಸ್ಟ್ 24 ರಂದು ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಆಗಸ್ಟ್ 24 ರಂದು ಬೆಳಿಗ್ಗೆ 10 ಗಂಟೆಗೆ ಮಳೆಯಿಂದ ಹಾನಿಗೊಳಗಾದ ಗದಗ–ನರಗುಂದ ರಸ್ತೆಯ ತಹಹಾಳ ಗ್ರಾಮದ ಹತ್ತಿರ ಇರುವ ಬೆಣ್ಣೆ ಹಳ್ಳಕ್ಕೆ ಕೊಚ್ಚಿಹೋದ ಸೇತುವೆ ವೀಕ್ಷಣೆ ಮಾಡುವರು. ನಂತರ ಅಣ್ಣಿಗೇರಿ ತಾಲ್ಲೂಕಿನ ವಿವಿಧ ಕಡೆ ರಸ್ತೆ ಹಾಗೂ ಮಳೆಯಿಂದ ಹಾನಿಗೊಳಗಾದ ಬೆಳೆಹಾನಿ ವೀಕ್ಷಣೆ ಮಾಡುವರು.

ನಂತರ ಹುಬ್ಬಳ್ಳಿ ತಾಲ್ಲೂಕು ಮತ್ತು ಕುಂದಗೋಳ ತಾಲ್ಲೂಕಿನ ಮಳೆಯಿಂದ ರಸ್ತೆ ಹಾಗೂ ಬೆಳೆ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ಮಾಡಿ, ಸ್ಥಳ ಪರಿಶೀಲನೆ ಮಾಡುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ : ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆಯ 13 ಫಲಾನುಭವಿ ಆದಾರಿತ ಯೋಜನೆಗಳನ್ನು 2025–26ನೇ ಸಾಲಿನಲ್ಲಿ ಸುವಿಧಾ ಯೋಜನೆ ಇವರಿಂದ ಡಿ.ಬಿ.ಟಿ (ನೇರ ನಗದು ವರ್ಗಾವಣೆ)ಆನ್‌ಲೈನ್ ವೇದಿಕೆ ತಂತ್ರಾಂಶದಡಿ ಅಳವಡಿಸಲಾಗುತ್ತಿದೆ. ಈ ಯೋಜನೆಗಳನ್ನು ಆನಲೈನ್ ವೇದಿಕೆಯಿಂದ ಅನುಷ್ಠಾನಗೊಳಿಸುವ ಉದ್ದೇಶದಿಂದ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯಡಿ ಡಿ.ಬಿ.ಟಿ (ನೇರ ನಗದು ವರ್ಗಾವಣೆ) ಆನಲೈನ್ ವೇದಿಕೆಯಲ್ಲಿ ಅಳವಡಿಸಲಾಗಿರುವ ಯೋಜನೆಗಳ ಪಟ್ಟಿ ಈ ಕೆಳಗಿನಂತಿವೆ.

ಸದರಿ ಯೋಜನೆಗಳಿಗೆ 2025–26ನೇ ಸಾಲಿಗೆ ವಿಕಲಚೇತನ ಫಲಾನುಭವಿಗಳು ಆನಲೈನ್ ಸೇವಾಸಿಂಧು ತಂತ್ರಾಂಶದ ಮೂಲಕ ಮೂಲಕ ಗ್ರಾಮ ಒನ್, ಮತ್ತು ಕರ್ನಾಟಕ ಒನ್ ಹಾಗೂ ನೇರವಾಗಿಯು ಸಹ ವಿಕಲಚೇತನರ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಸೇವಾಸಿಂಧು **(https://sevasindhu.karnataka.gov.in/Sevasindhu/Kannda)** ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ:20/08/2025 ಮತ್ತು ಕೊನೆಯ ದಿನಾಂಕ:30/09/2025 ಎಂದು ಅಂಗವಿಕಲರ ಕಲ್ಯಾಣಾಧಿಕಾರಿಗಳು ಕೆ. ಮಹಾಂತೇಶ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ತಾಲ್ಲೂಕ ಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಮ್.ಆರ್.ಡಬ್ಲೂ ಯಗಳಾದ ಖಾಜಾಹುಸೇನ ಕಾತರಕಿ, ತಾಲ್ಲೂಕ ಪಂಚಾಯತ, ಗದಗ 8867556465, ಬಸವರಾಜ ಓಲಿ, ತಾಲ್ಲೂಕ ಪಂಚಾಯತ, ರೋಣ–9741615926, ಶಶಿಕಲಾ ವಡ್ಡಟ್ಟಿ, ತಾಲ್ಲೂಕ ಪಂಚಾಯತ, ಮುಂಡರಗಿ 9611922445, ಭಾರತಿ ಮುರಶಿಳ್ಳಿ, ತಾಲ್ಲೂಕ ಪಂಚಾಯತ, ಶಿರಹಟ್ಟಿ 8951128679 ಶಿವಾನಂದ ಹಾದಿಮನಿ, ತಾಲ್ಲೂಕ ಪಂಚಾಯತ, ನರಗುಂದ 9591679022 ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಗದಗ ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ:029ರ ದೂರವಾಣಿ ಸಂಖ್ಯೆ: 08372–220419 ಮೂಲಕ ಸಂಪರ್ಕಿಸಬಹುದು. ಎಂದು ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಮಹಾಂತೇಶ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ

ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ಶಾಸಕ ಮಹೇಂದ್ರ ತಮ್ಮನವರ

ಹಳ್ಳೂರ : ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ನಿಜವಾದ ಪಂಚ ಯೋಜನೆಗಳ ಯಶಸ್ವಿಯೊಂದಿಗೆ ರಾಜ್ಯದ ಸಂಪೂರ್ಣ ಅಭಿವೃದ್ಧಿಗಾಗಿ ಕಂಕಣ ಬದ್ಧವಾಗಿ ಹಲವಾರು ಯೋಜನೆ ಗಳನ್ನು ಜಾರಿಗೆ ತಂದಿದೆ.

ನಾನು ನಿಮ್ಮ ಆಶೀರ್ವಾದದಿಂದ ಕುಡಚಿ ಕ್ಷೇತ್ರದ ಸೇವಕನಾಗಿರುವ ದಿಟ್ಟತನದಿಂದ ಗಟ್ಟಿಯಾಗಿ ನಿಂತು ನಿಮ್ಮ ಸೇವೆ ಮಾಡುವೆ ಎಂದು ಶಾಸಕ ಮಹೇಂದ್ರ ತಮ್ಮಣ್ಣವರ ಹೇಳಿದರು.

ಅವರು ರವಿವಾರ 17 ರಂದು ಮುಗಳ ಖೋಡ ಪಟ್ಟಣದ ನಿರಲಕೋಡಿ ವ್ಯಾಪ್ತಿಯಲ್ಲಿ ಕರ್ನಾಟಕ ಸರ್ಕಾರ ಕರ್ನಾಟಕ ನೀರಾವರಿ ಕಡಿತ, 2024–25 4071 ವಿಶೇಷ ಘಟಕ ಲೆಕ್ಕ ಶಿರ್ಷಿಕೆಯಡಿ ಅನುಮೋದನೆಗೊಂಡ ರೈತರ ಬಹುದಿನಗಳ ಬೇಡಿಕೆಯಾಗಿದ್ದ ಪಟ್ಟಣದ (1) ಜಿಎಲ್‌ಬಿಸಿ ಮುಖ್ಯ ಕಾಲುವೆಯ ಸರಪಳಿ ನಂ–45ರಲ್ಲಿ ಎಸ್ಕೆಪ್ ಹಳ್ಳಕ್ಕೆ ತಡೆಗೋಡೆ ನಿರ್ಮಾಣ ಮಾಡುವುದು ಅಂದಾಜು ಮೋತ್ತ = 400 ಲಕ್ಷಗಳು (2) ಜಿಎಲ್‌ಬಿಸಿ ಮುಖ್ಯ ಕಾಲುವೆಯ ಸರಪಳಿ ನಂ–48+850 ರಲ್ಲಿ ಬರುವ ಮುಗಳಖೋಡ ವಿತರಣಾ ಕಾಲುವೆಯ (ಕಿ.ಮಿ. 2 ರಿಂದ 11 ರ ವರೆಗೆ) ಸಿಸಿ ಲೈನಿಂಗ್ ಸೇವಾರಸ್ತೆ & ಸಿಟಿಸಿಗಳ ಸುಧಾರಣೆ ಅಂದಾಜು ಮೋತ್ತ = 300 ಲಕ್ಷಗಳು ಒಟ್ಟು ಏಳು ಕೋಟಿ ವೆಚ್ಚದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಾ, ಹಿಂದಿನ ಬಿಜೆಪಿ ಸರ್ಕಾರ ಸದೃಢ ಆರ್ಥಿಕ ವ್ಯವಸ್ಥೆ ಇಲ್ಲದೆ ಲಕ್ಷ ಕೋಟಿ ಗಿಂತ ಹೆಚ್ಚುಯೋಜನೆ ರೂಪಿಸಿ ಕಾರ್ಯರೂಪಕ್ಕೆ ತರದೆ ಪರಿತಪಿಸಿ ಹೊದರು. ಇಂದು ನಾವು ನುಡಿದಂತೆ ನಡೆದು ಸದೃಢ ಆರ್ಥಿಕ ವ್ಯವಸ್ಥೆಯಿಂದ ನಾಡಿನ ಜನತೆಯ ನಾಡಿ ಮಿಡಿತ ಅರೆತು ಯಶಸ್ವಿಯಾಗಿ ಕೆಲಸಗಳನ್ನು ಮಾಡುತ್ತಿದ್ದೇವೆ.

ಸಹಸದ ಬಿಜೆಪಿಯ ಸಾಮಾಜಿಕ ಜಾಲ ತಾಣಗಳ ಕಿಡಿಗೇಡಿಗಳು ಇವು ನಮ್ಮ ಯೋಜನೆಗಳು ಎಂದು ಪ್ರಚಾರಕ್ಕೆ ನಿಂತಿದ್ದಾರೆ. ದಿಟ್ಟತನದಿಂದ ನಿಮ್ಮ ಸೇವೆಗೆ ಸದಾ ಕಾಲ ಸಿದ್ಧನಾಗಿರುವ ನೀವು ಗಟ್ಟಿತ ನದಿಂದ ಜಾಗೃತರಾಗಿ, ಯಾವುದೇ ಹೊತ್ತು ಜಯ ನಮ್ಮದಾಗಿಸಿಕೊಂಡು ಒಟ್ಟಾಗಿ ಸಾಗೋಣ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಕಾ ಆ ಕಾ ರಾ ಉಪಾಧ್ಯಕ್ಷ ಚಂದ್ರು ಕುಲಿಗೋಡ, ಪುರಸಭೆ ಸದಸ್ಯ ಪರಪ್ಪ ಬೆತಗೌಡರ, ರಮೇಶ ಯಡವಣ್ಣವರ, ಪರುಶುರಾಮ ಕಟಕೋಳ, ಮಹಾವೀರ ಕುರಾಡೆ, ಮುಖಂಡ ಶ್ರೀಶೈಲ ಅಂಗಡಿ, ನಾಮನಿರ್ದೇಶಿತ ಸದಸ್ಯರಾದ ಗಂಗಪ್ಪ ಗೋಕಾಕ, ಅಶೋಕ ಕದಮ, ಅಶೋಕ ಹಳಿಂಗಳಿ,ಹಣಮಾಸಾಹೇಬ ನಾಯಿಕ, ಕುಡಚಿ ಕ್ಷೇತ್ರದ ಅಧ್ಯಕ್ಷ ಪ್ರದೀಪ ಹಾಲ್ಗುಣಿ, ಮಲ್ಲಪ್ಪ ಅಂಗಡಿ, ರಮೇಶ ನಾಶಿ, ಲಕ್ಷಣ ಹೊಸಟ್ಟಿ,ತಮ್ಮಣ್ಣ ಪಾಟೀಲ, ಈರಪ್ಪ ಅಂಗಡಿ, ಮಲ್ಲಪ್ಪ ಕುಳಲಿ, ಯುಗ ರಮೇಶ ಕಾಪಶಿ, ರೇವಪ್ಪ ದೊಡಮನಿಯ ನೀರಾವರಿ ಇಲಾಖೆಯ ಅಭಿಯಂತರಾದ ಎಚ್ ಎಲ್ ಪೂಜೆರಿ.ಭೀಮಪ್ಪ ಅಂಗಡಿ.ಹಾಗೂ ಕಾರ್ಯ ಕರ್ತರು ಇತರರು ಇದ್ದರು.

ಸ್ಥಳೀಯ ಪುರಸಭೆ ಅಧ್ಯಕ್ಷ ಉಪಾಧ್ಯಕ್ಷರು ಹಾಗೂ 21 ನೇ ವಾರ್ಡಿನ ಹಾಗೂ ಬಿಜೆಪಿ ಆಡಳಿತದ ಸದಸ್ಯರು ಹಾಗೂ ಮುಖ್ಯಾಧಿಕಾರಿ, ಸಿಬ್ಬಂದಿಗಳ ಅನೂಪಸ್ಥಿತಿ ಜನರ ಮಾತಿಗೆ ಆಹಾರವಾಯಿತು. ಸಂತೋಷ ಅರಭಾವಿ ಸ್ವಾಗತಿಸಿ. ಮುರಿಗೆಪ್ಪ ಮಾಲಗಾರ ನಿರೂಪಿಸಿ. ಶ್ರೀಶೈಲ ಅಂಗಡಿ ವಂದಿಸಿದರು.

****

ಅರಿವು ಇದ್ದಲ್ಲಿ ಗುರು ಇರುವನು: ಶ್ರೀ ಬಸವರಾಜೇಂದ್ರ ಸ್ವಾಮಿಗಳು

ಮುಗಳಖೋಡ: ಅಲ್ಲಮಪ್ರಭು ಮತ್ತು ಬಸವಣ್ಣನವರ ಮಧ್ಯದ ಶ್ರೇಷ್ಠವಾದ ಭಕ್ತಿಯನ್ನು ತಿಳಿಸುತ್ತಾ, ಭಕ್ತಿಯ ಅರ್ಥ ತಿಳಿದು ಗುರುಗಳನ್ನು ಪಡೆಯಬೇಕು ಮತ್ತು ದಾನ ಧರ್ಮ ಮಾಡುತ್ತಾ ಶ್ರೇಷ್ಠವಾದ ಭಕ್ತಿಯಿಂದ ನಾನು ಯಾರು, ಹೇಗಿರಬೇಕು ಎಂದು ಅರಿತು, ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿದುಕೊಂಡು ಭಕ್ತಿಯ ಮಾರ್ಗದಲ್ಲಿ ತೊಡಗಿಕೊಂಡರೆ ಆ ದೇವರು ಖಂಡಿತವಾಗಿಯೂ ಅಲ್ಲಿ ಇದ್ದೇ ಇರುತ್ತಾನೆ ಎಂದು ಅಚಲೇರಿ ಜಿಡಗಾ ಮಠದ ಶ್ರೀ ಬಸವರಾಜೇಂದ್ರ ಮಹಾಸ್ವಾಮಿಗಳು ಹೇಳಿದರು.

ಅವರು ಸಮೀಪದ ಖಿಣದಾಳ ಗ್ರಾಮದ ಶ್ರೀ ಹುಲಕಾಂತೇಶ್ವರ ಒಳಗಿನ ಮಠದಲ್ಲಿ ಶ್ರಾವಣ ಮಾಸದ ಒ

ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ನೀಡಿ ಸರ್ಕಾರ ಆದೇಶ

ಧಾರವಾಡ : ಪೊಲೀಸ್ ಇಲಾಖೆಯಲ್ಲಿ ಸಂಚಾರಿ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ, ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಸರ್ಕಾರವು 2025 ನೇ ಆಗಸ್ಟ್ 21 ರಂದು ಆದೇಶ ಹೊರಡಿಸಿದೆ.

ಈ ರಿಯಾಯಿತಿಯು 2025 ನೇ ಆಗಸ್ಟ್ 23 ರಿಂದ ಸೆಪ್ಟೆಂಬರ್ 12 ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ.

ಸರ್ಕಾರದ ಆದೇಶದ ದಿನಾಂಕ:11.02.2023ರ ಒಳಗಾಗಿ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ಒಂದು ಬಾರಿಯ ಕ್ರಮವಾಗಿ (ಐಟಿಜಿ ಣಬಟಜ ಟಜಬಚಿ-ಣಡಿಜಿ) ಮಾತ್ರ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ನೀಡಿ ಆದೇಶಿಸಲಾಗಿತ್ತು. ಸರ್ಕಾರದ ದಿನಾಂಕ: 03-03-2023ರ ಆದೇಶದಲ್ಲಿ ಪೊಲೀಸ್ ಇಲಾಖೆಯಲ್ಲಿ ಸಂಚಾರಿ ಇ-ಚಲನ್‌ನಲ್ಲಿ ದಿನಾಂಕ:11.02.2023 ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ. ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತೊಂದು ಬಾರಿಗೆ ಶೇ. 50 ರಷ್ಟು ರಿಯಾಯಿತಿ ನೀಡಿ ಆದೇಶಿಸಲಾಗಿತ್ತು.

ಸರ್ಕಾರದ ದಿನಾಂಕ 05-07-2023 ರ ಆದೇಶದಲ್ಲಿ ಪೊಲೀಸ್ ಇಲಾಖೆಯಲ್ಲಿ ಸಂಚಾರಿ ಇ-ಚಲನ್‌ನಲ್ಲಿ ದಿನಾಂಕ:11.02.2023 ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ, ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತೊಂದು ಬಾರಿಗೆ ಶೇ. 50 ರಷ್ಟು (ಐವತ್ತರಷ್ಟು ಮಾತ್ರ) ರಿಯಾಯಿತಿ ನೀಡಿ ಆದೇಶಿಸಲಾಗಿತ್ತು ಹಾಗೂ ಈ ರಿಯಾಯಿತಿಯು ದಿನಾಂಕ:09.09.2023 ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ತಿಳಿಸಲಾಗಿತ್ತು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳ ದಿನಾಂಕ 26-06-2025 ಮತ್ತು ದಿನಾಂಕ 12-08-2025 ಪತ್ರಗಳಲ್ಲಿ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50%ರಷ್ಟು ರಿಯಾಯಿತಿ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ದಿನಾಂಕ:05.07.2025 ರಿಂದ 11.07.2025ರವರೆಗೆ ಕಾಲಾವಕಾಶವನ್ನು ಕಲ್ಪಿಸಿ ಆದೇಶ ಹೊರಡಿಸುವಂತೆ ಕೋರಲಾಗಿತ್ತು. ಮುಂದುವರೆದು ಸದರಿ ಅವಧಿಯು ಮುಕ್ತಾಯವಾಗಿರುವುದರಿಂದ ಸದರಿ ಕಾಲಾವಕಾಶವನ್ನು ದಿನಾಂಕ:23.08.2025 ರಿಂದ 12.09.2025 ರವರೆಗೆ ಕಲ್ಪಿಸುವಂತೆ ಕೋರಿರುತ್ತಾರೆ.

ಬೆಂಗಳೂರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ದಿನಾಂಕ 04-03-2025 ರ ಪ್ರಸ್ತಾವನೆಯಲ್ಲಿ ಪೊಲೀಸ್ ಇಲಾಖೆಯ ಸಂಚಾರಿ ಜ-ಉಚಿಟಟಚಿಟ ಗಳಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಹಾಗೂ ಸಾರಿಗೆ ಇಲಾಖೆಯಲ್ಲಿ 2018-19ನೇ ಸಾಲಿನ ಪೂರ್ವದಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ವಾಹನ ಮಾಲೀಕರುಗಳಿಂದ ಶೇ.50 ರಷ್ಟು ರಿಯಾಯಿತಿ ನೀಡಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅವಕಾಶ ಕಲ್ಪಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ರಿಯಾಯಿತಿಯು 2025ನೇ ಆಗಸ್ಟ್ 23 ರಿಂದ ಸೆಪ್ಟೆಂಬರ್ 12 ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಆದೇಶಿಸಲಾಗಿದೆ ಎಂದು ಸಾರಿಗೆ ಇಲಾಖೆಯ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಬಿಟಿಡಿಎ ಸೂಚನೆ

ಬಾಗಲಕೋಟೆ: : ಘಟಪ್ರಭಾ ನದಿ ನೀರನ್ನು ಗದ್ದನಕೇರಿ ಕ್ರಾಸ್ ನಲ್ಲಿರುವ ಜಲಶುದ್ಧೀಕರಣ ಘಟಕದಿಂದ ಶುದ್ಧೀಕರಿಸಿದ ನೀರನ್ನು ಬಾಗಲಕೋಟೆ ನವನಗರಕ್ಕೆ ಪೂರೈಸಲಾಗುತ್ತಿದ್ದು, ಪ್ರಸ್ತುತ ಮಳೆಗಾಲ ಇರುವುದರಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಘಟಪ್ರಭಾ ನದಿಗೆ ಹೊಸ ನೀರು ಹರಿದು ಬಂದಿರುವ ಕಾರಣ ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ಕುಡಿಯುವ ನೀರನ್ನು ಸೋಸಿ, ಕಾಯಿಸಿ, ಆರಿಸಿ ಉಪಯೋಗಿಸಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರರು, ಬಿಟಿಡಿಎ ವಿಭಾಗ ನಂ: 01 ಬಾಗಲಕೋಟೆ ಇವರು ಪ್ರಾಧಿಕಾರದ ವತಿಯಿಂದ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಶ್ರೇಷ್ಠ ಕೃಷಿಕ ಪ್ರಶಸ್ತಿ ಅರ್ಜಿ ಆಹ್ವಾನ

ಬಾಗಲಕೋಟೆ: : 2025-26 ನೇ ಸಾಲಿನ ಆತ್ಮ ಯೋಜನೆಯಡಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ "ಶ್ರೇಷ್ಠ ಕೃಷಿಕ ಪ್ರಶಸ್ತಿ"ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವಿಧ ಕೃಷಿ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಹಾಗೂ ರೈತ ಮಹಿಳೆಯರು ಅರ್ಜಿ ಸಲ್ಲಿಸಬಹುದು. ಬಾದಾಮಿ, ಬಾಗಲಕೋಟೆ, ಬೀಳಗಿ, ಹುನಗುಂದ, ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಆ.22 ರಿಂದ ಅರ್ಜಿ ಲಭ್ಯವಿದ್ದು, ಭರ್ತಿ ಮಾಡಿದ ಅರ್ಜಿಯನ್ನು ಸೆಪ್ಟೆಂಬರ್,10ರ ಸಂಜೆ 05:30 ಗಂಟೆಯೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಅಥವಾ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಲು ಜಂಟಿ ಕೃಷಿ ನಿರ್ದೇಶಕ ಲಕ್ಷ್ಮಣ ಎಸ್. ಕಳ್ಳೆನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬಾಗಲಕೋಟೆ: : 2025-26ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರ ದೀಕ್ಷಾಭೂಮಿಯಲ್ಲಿ ಅಕ್ಟೋಬರ್ 02, ರಂದು ನಡೆಯುವ ಪ್ರವರ್ತನಾ ದಿನ (ವಿಜಯದಶಮಿ) ಕಾರ್ಯಕ್ರಮಕ್ಕೆ ಡಾ. ಬಿ.ಆರ್. ಅಂಬೇಡ್ಕರರ ಅನುಯಾಯಿಗಳ ಯಾತ್ರೆಯನ್ನು ಸರ್ಕಾರ ಅನುಮೋದಿಸಿದೆ. ಜಿಲ್ಲಾವಾರು ಒಟ್ಟು 7,700 ಅರ್ಹ ಯಾತ್ರಾರ್ಥಿಗಳನ್ನು ಆಯ್ಕೆ ಮಾಡಿ ಕೆ.ಎಸ್.ಆರ್.ಟಿ.ಸಿ ಬಸ್ಸು ಹಾಗೂ ರೈಲಿನ ಮೂಲಕ ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 04 ರವರೆಗೆ ಪ್ರಯಾಣ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಆಸಕ್ತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಹ ಯಾತ್ರಾರ್ಥಿಗಳು ಆ.25 ರಿಂದ ಸೆಪ್ಟೆಂಬರ್ 09ರ ಒಳಗಾಗಿ ಸಮಾಜ ಕಲ್ಯಾಣ ಇಲಾಖೆಯ ಅಧಿಕೃತ ಜಾಲತಾಣ **https://swd.karnataka.gov.in** ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ಭರ್ತಿ ಮಾಡಿದ ಅರ್ಜಿಯ ಪ್ರತಿಗಳು ಹಾಗೂ ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಸಹಾಯಕ ಸಮಾಜ ಕಲ್ಯಾಣ ನಿರ್ದೇಶಕರ ಕಛೇರಿಗೆ ನಿಗದಿತ ಅವಧಿಯಲ್ಲಿ ಸಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಚಾರಿ ತೊಟ್ಟಗಳ ವ್ಯವಸ್ಥೆ

ಬಾಗಲಕೋಟೆ: : ಇದೇ ಆ.27ರಂದು ಗಣೇಶ ಚತುರ್ಥಿ ಇದ್ದು ಗಣೇಶ ಮೂರ್ತಿಗಳ ವಿಸರ್ಜನೆಗೆ ಮೊದಲನೇ ದಿನ (ಆ.27) ಹಾಗೂ ಐದನೇ ದಿನ (ಆ.30) ರಂದು ಬಾಗಲಕೋಟೆ ಜಿಲ್ಲಾಡಳಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಸಂಜೆ 06 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಕಿಲ್ಲಾ ಹಳೆ ಬಾಗಲಕೋಟ, ಹೆಚ್ ಪಿ ಪೆಟ್ರೋಲ್ ಪಂಪ ಹತ್ತಿರ ಸೆ.ನಂ-57 ನವನಗರ, ಎಲ್ ಐ ಸಿ ಸರ್ಕಲ್ ನವನಗರ, ವಿದ್ಯಾಗಿರಿ ಕಾಲೇಜು ಸರ್ಕಲ್ 04 ಸ್ಥಳಗಳಲ್ಲಿ ಸಂಚಾರಿ ತೊಟ್ಟಿಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಸಾರ್ವಜನಿಕರು ಗಣೇಶ ಮೂರ್ತಿಗಳನ್ನು ಜಲಮೂಲಗಳಲ್ಲಿ ವಿಸರ್ಜಿಸದೇ ಜಲಮಾಲಿನ್ಯ ತಡೆಯಲು ನೆರವಾಗುವಂತೆ ಕ.ರಾ.ಮಾ.ನಿ.ಮಂ ಪರಿಸರ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಮ್ಹಾನ್ಸ್- ಧಾರವಾಡ ಸಂಸ್ಥೆಯ ಟೆಲಿ-ಮನಸ್ ವಿಭಾಗದ ಸಿಬ್ಬಂದಿಗಳ (On Site Training) ತರಬೇತಿ ಕಾರ್ಯಾಗಾರ

ಧಾರವಾಡ : ಡಿಮ್ಹಾನ್ಸ್, ಧಾರವಾಡ ಸಂಸ್ಥೆಯ ಟೆಲಿ-ಮನಸ್ ವಿಭಾಗದ ಆಪ್ತ ಸಮಾಲೋಚಕರಿಗೆ ಮೂರು ದಿನದವರೆಗೆ **(On Site Training)** ತರಬೇತಿ ಕಾರ್ಯಾಗಾರವನ್ನು ನಿಮ್ಹಾನ್ಸ್, ಬೆಂಗಳೂರು ಟೆಲಿ-ಮನಸ್ ಅಪೆಕ್ಸ್ ತಂಡದಿಂದ ಆಪ್ತಸಮಾಲೋಚಕರಿಗೆ ತರಬೇತಿ ನೀಡಲಾಯಿತು.

ಕಾರ್ಯಾಗಾರದಲ್ಲಿ ಬೆಂಗಳೂರು ಮಾನಸಿಕ ಆರೋಗ್ಯ ಸೌಧದ ಉಪನಿರ್ದೇಶಕ ಡಾ. ರಜನಿ.ಪಿ. ಅವರು ರಾಜ್ಯದಲ್ಲಿ ಟೆಲಿ-ಮನಸ್ ಟೋಲ್ ಫ್ರೀ ಸಂಖ್ಯೆ 14416 ಮತ್ತು 1800-89-14416 ರ ಕಾರ್ಯಕ್ಷಮತೆಯ ಬಗ್ಗೆ ಮತ್ತು ಆಪ್ತಸಮಾಲೋಚಕರ ಪಾತ್ರದ ಕುರಿತು ವಿವರಿಸಿದರು. ಮತ್ತು ಬೆಂಗಳೂರು ಮನೋವ್ಯಕೀಯ ವಿಭಾಗ ಮತ್ತು ಪ್ರಿನ್ಸಿಪಲ್ ಇನ್‌ವೆಸ್ಟಿಗೇಟರ್ ಟೆಲಿ-ಮನಸ್‌ನ ಪ್ರಾಧ್ಯಾಪಕ ಡಾ. ನವೀನಕುಮಾರ ಸಿ. ಅವರು ಟೆಲಿ-ಮನಸ್ ಕಾರ್ಯಕ್ರಮದ ದೃಷ್ಟಿ, ಗುರಿ, ಉದ್ದೇಶ ಮತ್ತು **(On Site Traning)** ಪ್ರಾಮುಖ್ಯತೆಯ ಬಗ್ಗೆ ತಿಳಿಸಿದರು. ನಿಮ್ಹಾನ್ಸ್‌ನ ಮನೋವ್ಯಕೀಯ ವಿಭಾಗ ಹೆಚ್ಚುವರಿ ಪ್ರಾಧ್ಯಾಪಕ ಡಾ. ಎನ್.ಮಂಜುನಾಥ ಅವರು ಆಪ್ತಸಮಾಲೋಚನೆಯ ಕೌಶಲ್ಯಗಳನ್ನು ಬಲಪಡಿಸುವ ಕುರಿತು ಮತ್ತು ಮಾನಸಿಕ ಆರೋಗ್ಯ ಸೇವೆಗಳ ಕುರಿತು ತಿಳಿಸಿದರು. ಮೇಜರ್ ಸಿದ್ದಲಿಂಗಯ್ಯಾ ಹಿರೇಮಠ ಅವರು ಟೆಲಿ-ಮಾನಸ ಕಾರ್ಯಕ್ಷಮತೆಯ ಬಗ್ಗೆ ವಿವರಿಸಿದರು. ಧಾರವಾಡ ಡಿಮ್ಹಾನ್ಸ್‌ನ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು ಹಾಗೂ ಕರ್ನಾಟಕ ಟೆಲಿ-ಮನಸ್-02 ಸೆಲ್ ನೋಡಲ್ ಆಫಿಸರ್ ಡಾ. ರಂಗನಾಥ ಕುಲಕರ್ಣಿ ಅವರು ಟೆಲಿ-ಮನಸ್ ಸೆಲ್-02 ರಲ್ಲಿ ಕಳೆದ 2.5 ವರ್ಷಗಳಿಂದ ನಡೆದ ಕಾರ್ಯ ಚಟುವಟಿಕೆಗಳ ಬಗ್ಗೆ ಮತ್ತು ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಂಡ ಕುರಿತು ವಿವರವಾದ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ಪ್ರಭಾರಿ ವೈದ್ಯಕೀಯ ಅಧೀಕ್ಷಕ ಡಾ. ರಾಘವೇಂದ್ರ ನಾಯಕ, ನಿರ್ದೇಶಕ ಡಾ. ಅರಣಕುಮಾರ ಸಿ ಅವರು ಭಾಗವಹಿಸಿದ್ದರು.

ಗ್ರಾಮ ಪಂಚಾಯತ ನೌಕರರ 3 ನೇ ತಾಲೂಕು ಸಮ್ಮೇಳನ ಉದ್ಘಾಟನೆ

ಬೈಲಹೊಂಗಲ: ಗ್ರಾಮ ಪಂಚಾಯತನಲ್ಲಿ ಕಡಿಮೆ ವೇತನದಲ್ಲಿ ದುಡಿಯುತ್ತಿರುವ ಪಂಚಾಯತ ನೌಕರರಿಗೆ ಪಿಂಚಣಿ ಜಾರಿಯಾಗಬೇಕೆಂದು ಜಿಲ್ಲಾ ಸಮಿತಿ ಅಧ್ಯಕ್ಷ ವೀರಭದ್ರ ಕಂಪ್ಲಿ ಆಗ್ರಹಿಸಿದರು.

ಅವರು ನಗರದ ತಾಪಂ ಸಭಾಭವನದಲ್ಲಿ ನಡೆದ ಗ್ರಾಮ ಪಂಚಾಯತ ನೌಕರರ 3 ನೇ ತಾಲೂಕು ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಗ್ರಾಮ ಪಂಚಾಯತ ನೌಕರರು ರಾಜ್ಯದಲ್ಲಿ ನಿರಂತರ ಹೋರಾಟ ಮಾಡಿದ ಫಲವಾಗಿ ಸರ್ಕಾರ ಕನಿಷ್ಠ ವೇತನ ಶೆಡ್ಯೂಲನ್ನು ತಂದಿದ್ದಾರೆ. ಪ್ರತಿ ತಿಂಗಳು 200 ರಿಂದ 300 ವೇತನದಲ್ಲಿ ದುಡಿಯುತ್ತಿರುವ ನಮಗೆ ಇಂದು ಸಂಘಟನೆಯ ಹೋರಾಟದ ಬಲದಿಂದ ರೂ.18000 ವೇತನ ಬರುತ್ತಿದೆ. ಮುಂದಿನ ದಿನಗಳಲ್ಲಿ ಸರ್ಕಾರ ನೌಕರರಿಗೆ ಪಿಂಚಣಿ ಜಾರಿ ಮಾಡಬೇಕು ಎಂದರು.

ತಾಪಂ.ಇಒ ಸಂಜೀವ ಜುನ್ನೂರ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಸರ್ಕಾರದ ಯೋಜನೆಗಳನ್ನು ಜಾರಿ ಮಾಡುವ ನಿಟ್ಟಿನಲ್ಲಿ ಗ್ರಾಮ ಪಂಚಾಯತ ನೌಕರರ ಕಾರ್ಯ ಶ್ಲಾಘನೀಯವಾಗಿದೆ ಎಂದರು. ತಾಲೂಕು ಅಧ್ಯಕ್ಷ ಮಲ್ಲನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಸಂಜಯ ಹೊಸಮನಿ, ಮಂಜುನಾಥ ಕಡಸಗಟ್ಟಿ, ನಾಗೇಶ ಜೋಳದ, ಸೋಮಲಿಂಗ ಮರೇಪ್ಪನವರ, ಬಸವರಾಜ ಪೂಜೇರ, ಗಂಗಪ್ಪ ಯರಗಟ್ಟಿ, ಲಕ್ಷ್ಮಣ ಮಾರಿಹಾಳ, ರಮೇಶ ಹುಲಮನಿ, ಶ್ರೀಶೈಲ ಚಿನಗುಡಿ ಅನೇಕರು ಇದ್ದರು.

ಇದೇ ವೇಳೆ ಗ್ರಾಮ ಪಂಚಾಯತ ನೌಕರರ ಸಂಘದ 21 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಜನನಾಯಕ ಡಿ.ದೇವರಾಜ ಅರಸು ಕೊಡುಗೆ ರಾಜ್ಯಕ್ಕೆ ಅಪಾರ

ಬೈಲಹೊಂಗಲ-ತಾಲೂಕಾ ಆಡಳಿತ, ತಾಲೂಕಾ ಪಂಚಾಯತ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಪುರಸಭೆ ಇವರ ಸಹಯೋಗದಲ್ಲಿ ದಿವಂಗತ ಡಿ ದೇವರಾಜ್ ಅರಸುರವರ 110 ನೇ ಜನ್ಮ ದಿನಾಚರಣೆಯನ್ನು ಧಾರವಾಡ ರಸ್ತೆಯಲ್ಲಿನ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಭಾಭವನದಲ್ಲಿ ಅತ್ಯಂತ ಸಡಗರ-ಸಂಭ್ರಮದಿಂದ ಬುಧವಾರ ಆಚರಿಸಲಾಯಿತು.

ತಹಶೀಲ್ದಾರ ಹಣಮಂತ ಶಿರಹಟ್ಟಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಮಾಜಿಕ ನ್ಯಾಯದ ಹರಿಕಾರರಾಗಿ, ಹಿಂದುಳಿದ ವರ್ಗಗಳ ಏಳ್ಗೆಗಾಗಿ ದೇವರಾಜ ಅರಸ್ ಅವರು ರಾಜ್ಯಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದು, ಜನ ಕಲ್ಯಾಣಕ್ಕಾಗಿ ಸಾಕಷು ಶ್ರಮಿಸಿದ ಅಂತಹ ಮಹಾನ ವ್ಯಕ್ತಿ ಸಾಧಕರಾಗಿ ನಮ್ಮೆಲ್ಲರ ಮನದಲ್ಲಿ ಇದ್ದಾರೆ ಎಂಬುದು ಹೆಮ್ಮೆಯ ವಿಷಯ ಎಂದರು.

ಪುರಸಭೆ ಅಧ್ಯಕ್ಷ ವಿಜಯ ಬೋಳಣ್ಣವರ, ಮುಖ್ಯಾಧಿಕಾರಿ ವಿರೇಶ ಹಸಬಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ ಜುನ್ನೂರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಎಸ್. ಎಸ್.ಸಿದ್ದಣ್ಣವರ, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಯಾನಂದ ನರಸಣ್ಣವರ, ಪಿಎಸೈ ಗುರುರಾಜ ಕಲಬುರ್ಗಿ, ಸಿಡಿಪಿಓ ಅರುಣಕುಮಾರ ಎಸ್, ನೀರಾವರಿ ಇಲಾಖೆಯ ಅಧಿಕಾರಿ ಎಂ.ಎಚ್.ಶೇಖ, ಸಮಾಜ ಕಲ್ಯಾಣ ಇಲಾಖೆಯ ಸುರೇಶ ಬೈಲಪ್ಪನವರ, ಮುಖ್ಯ ಅತಿಗಳಾಗಿ ಆಗಮಿಸಿದ್ದರು. ಕಚೇರಿಯ ಸಿಬ್ಬಂದಿ, ನಿಲಯ ಪಾಲಕರು ಪಾಲ್ಗೊಂಡಿದ್ದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕಾಧಿಕಾರಿ ಎಂ.ಬಿ.ಚಿನಗುಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆಎಲ್‌ಇ ಸಂಸ್ಥೆಯ ಪಿಯು ಕಾಲೇಜಿನ ಉಪನ್ಯಾಸಕಿ ಸವಿತಾ ರೊಟ್ಟಿ ದಿವಂಗತ ಡಿ. ದೇವರಾಜ ಅರಸ್ ಅವರ ಸಾಧನೆ-ಸೇವೆಗಳ ಬಗ್ಗೆ ಸವಿಸ್ತಾರವಾಗಿ ಉಪನ್ಯಾಸ ನೀಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಇದಕ್ಕೂ ಮೊದಲು ಗಣ್ಯರು ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪೂಜೆಗೈದು ನಮನ ಸಲ್ಲಿಸಿದರು.

ಬಿಸಿಎಂ ಇಲಾಖೆಯ ತಾಲೂಕಾಧಿಕಾರಿ ಎಂ.ಬಿ.ಚಿನಗುಡಿ ಸ್ವಾಗತಿಸಿದರು. ಪವನ ಬೋಳೆತ್ತಿನ ನಿರೂಪಿಸಿದರು. ಸಂಗಮೇಶ ಪಟ್ಟಣಶೆಟ್ಟಿ ವಂದಿಸಿದರು.

ಫೋಟೋ ಶೀರ್ಷಿಕೆ-ಬೈಲಹೊಂಗಲದಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಭಾಭವನದಲ್ಲಿ ಡಿ, ದೇವರಾಜ ಅರಸು ಅವರ 110 ನೇ ಜನ್ಮ ದಿನಾಚಾರಣೆ ಸಂದರ್ಭದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹೆಬ್ಬಳ್ಳಿ ಗ್ರಾಮದಲ್ಲಿ 91 ಪಿಓಪಿ ಗಣೇಶ ವಿಗ್ರಹಗಳ ವಶಕ್ಕೆ ಪಡೆದ ತಪಾಸಣೆ ತಂಡ

**ಧಾರವಾ

ಜಿಲ್ಲಾ ಪೊಲೀಸ್ ಇಲಾಖೆ : ಗೌರಿ ಗಣೇಶ ಹಾಗೂ ಈದ-ಮಿಲಾದ ಹಬ್ಬದ ಆಚರಣೆ ಕುರಿತು ಶಾಂತಿ, ಸುವ್ಯವಸ್ಥೆಗಾಗಿ ಪೂರ್ವಭಾವಿ ಸಭೆ

ಧಾರವಾಡ : ಪಿ.ಎಚ್.ಕ್ಯೂ ಶ್ರೀ. ದುರ್ಗಾದೇವಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನಿನ್ನೆ (ಆ.20) ರಂದು ಧಾರವಾಡ ಪೊಲೀಸ್ ಅಧೀಕ್ಷಕರಾದ ಗುಂಜನ್ ಆರ್ಯ ಅವರು ಗೌರಿ ಗಣೇಶ ಹಾಗೂ ಈದ-ಮಿಲಾದ ಹಬ್ಬದ ಆಚರಣೆಯ ಪೂರ್ವಭಾವಿ ಸಭೆ ಜರುಗಿಸಿ, ಮಾತನಾಡಿದರು.

ಗೌರಿಗಣೇಶ ಹಬ್ಬ ಮತ್ತು ಈದ್-ಮಿಲಾದ್ ಹಬ್ಬಕ್ಕೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಡಿಜೆ ಸೌಂಡ ಸಿಸ್ಟಮ್ ನಿಷೇಧಿಸಲಾಗಿದ್ದು, ಡಿ.ಜೆ. ಸೌಂಡ ಸಿಸ್ಟಂ ಹಚ್ಚುವುದರಿಂದ ಗ್ರಾಮಗಳಲ್ಲಿಯ ವೃದ್ದರಿಗೆ, ಚಿಕ್ಕ ಮಕ್ಕಳಿಗೆ, ಗರ್ಭಿಣಿಯರಿಗೆ ತೊಂದರೆಯಾಗುತ್ತಿದ್ದು, ಡಿ.ಜೆ ಹಚ್ಚುವ ಬದಲಾಗಿ ಡೊಳ್ಳು ಕುಣಿತ, ಹೆಜ್ಜೆ ಮೇಳ, ಕರಡಿ ಮಜಲು ಅಂತಹ ಸಾಂಪ್ರದಾಯಿಕ ಜನಪದ ಕಲೆಗಳನ್ನು ಮಾಡಿಸುತ್ತಾ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು. ಗಣೇಶ ಮೂರ್ತಿ ಪ್ರತಿಷ್ಠಾಪನೆ ಹಾಗೂ ವಿಸರ್ಜನೆ ಕಾಲಕ್ಕೆ ಮೆರವಣಿಗೆಯ ಮಾರ್ಗವನ್ನು ಮುಂಚಿತವಾಗಿ ಪೊಲೀಸ್

ಠಾಣೆಗೆ ತಿಳಿಸುವುದು ಮತ್ತು ಮಾರ್ಗ ಬದಲಾವಣೆ ಮಾಡುವುದು ಇದ್ದಲ್ಲಿ ಕೂಡಲೇ ಪೊಲೀಸ್ ಠಾಣೆಗೆ ಮಾಹಿತಿ ನೀಡಿಬೇಕು. ಕೋಮು ಸೌಹಾರ್ಧತೆಗೆ ದಕ್ಕೆಯಾಗದಂತೆ ಎರಡೂ ಹಬ್ಬಗಳ ಆಚರಣೆಯನ್ನು ಮಾಡಲು ಅವರು ಸೂಚಿಸಿದರು.

ಗಣೇಶ ಮೂರ್ತಿ ಪ್ರತಿಷ್ಠಾಪನೆ ಹಾಗೂ ವಿಸರ್ಜನೆ ಕಾಲಕ್ಕೆ ಸಾರ್ವಜನಿಕರಿಗೆ ಹಾಗೂ ಸಂಚಾರಕ್ಕೆ ಅಡೆತಡೆ ಆಗದಂತೆ ನೋಡಿಕೊಳ್ಳುವುದು. ಗಣೇಶ ಮಂಟಪದಲ್ಲಿ ಅಗ್ನಿ ಅವಗಡಗಳನ್ನು ತಪ್ಪಿಸಲು ಅಗ್ನಿ ಶಮನ ಸಲಕರಣೆಗಳನ್ನು ಕೂಡಲೇ ಸಿಗುವಂತೆ ವ್ಯವಸ್ಥೆ ಮಾಡಿಟ್ಟುಕೊಳ್ಳುವುದು. ಗಣೇಶ ಹಬ್ಬದ ಆಚರಣೆ ಕಾಲಕ್ಕೆ ಸರಕಾರದ ಆದೇಶದಂತೆ ಹಸಿರು ಪಟಾಕಿಗಳನ್ನು ಸಾರ್ವಜನಿಕರಿಗೆ ತೊಂದರೆ ಆಗದಂತೆ ಬಳಕೆ ಮಾಡಲು ಸೂಚಿಸಿ, ರಾತ್ರಿ 10 ಗಂಟೆಯ ಎಲ್ಲ ಗಣೇಶ ಮೂರ್ತಿಗಳ ವಿಸರ್ಜನೆ ಮಾಡುವುದು. ಗೌರಿ ಗಣೇಶ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ ಗಣೇಶ ವಿಸರ್ಜನೆ ಆಗುವವರೆಗೂ 24*7 ಎರಡು ಜನ ಸ್ವಯಂ ಸೇವಕರು ಇರುವಂತೆ ಆಯಾ ಮಂಡಳಿಯ ಮುಖಂಡರು ಜವಾಬ್ದಾರಿಯಿಂದ ನೋಡಿಕೊಳ್ಳಬೇಕು ಎಂದು ಹೇಳಿದರು.

ಮುಂಬರುವ ಗೌರಿ ಗಣೇಶ ಹಾಗೂ ಈದ ಮಿಲಾದ ಹಬ್ಬಗಳನ್ನು ಎಲ್ಲರೂ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಸರಕಾರ ನಿಯಮನುಸಾರ ಹಬ್ಬಗಳು ಶಾಂತಿಯುತವಾಗಿ ನಡೆಯುವಂತೆ ತಮ್ಮ ತಮ್ಮ ಊರಿನ ಯುವಕರಿಗೆ ತಿಳುವಳಿಕೆ ನೀಡಿ, ನೋಡಿಕೊಳ್ಳುವುದು. ಗೌರಿ ಗಣೇಶ ಹಾಗೂ ಈದ ಮಿಲಾದ ಹಬ್ಬಗಳಿಗೆ ಸಂಬಂಧಿಸಿದಂತೆ ನಿಮಗೆ ಯಾವುದೇ ತೊಂದರೆ, ಸಮಸ್ಯೆಗಳು ಇದ್ದಲ್ಲಿ ಇಲಾಖೆಗೆ ಮುಂಚಿತವಾಗಿ ತಿಳಿಸುವುದು. ಗೌರಿ ಗಣೇಶ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ ಹಾಗೂ ವಿಸರ್ಜನೆಯ ರಸ್ತೆ ಮಾರ್ಗದಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸುವ ಬಗ್ಗೆ ಆಯಾ ಮಂಡಳಿಯವರು ಸಿ.ಸಿ.ಕ್ಯಾಮರಾಗಳ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಧಾರವಾಡ ತಹಶೀಲ್ದಾರ ಡಾ. ಡಿ.ಎಚ್.ಹೂಗಾರ ಸೇರಿದಂತೆ ಹೆಸ್ಕಾಂ, ಅಗ್ನಿ ಶಾಮಕ ಅಧಿಕಾರಿಗಳು, ಧಾರವಾಡ ಜಿಲ್ಲೆಯ ಎಲ್ಲ ಪೊಲೀಸ್ ಅಧಿಕಾರಿಗಳು ಹಾಗೂ ಹಿಂದೂ ಮತ್ತು ಮುಸ್ಲಿಂ ಬಾಂಧವರು ಸೇರಿದಂತೆ 200 ಕ್ಕೂ ಹೆಚ್ಚು ಸಾರ್ವಜನಿಕರು ಹಾಜರಿದ್ದರು.

ರಾಯಬಾಗ: ಪಟ್ಟಣದ ಮಹಾವೀರ ಭವನದಲ್ಲಿ ಬುಧವಾರ ರಾತ್ರಿ ಹಮ್ಮಿಕೊಂಡಿದ್ದ ಬಾಹುಬಲಿ ಮೊಬೈಲ್ಸ್‌ನ 4ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅಂಧರಿಗೆ ಉಚಿತವಾಗಿ ಮೊಬೈಲ್ ಮತ್ತು ಬಟ್ಟೆಗಳನ್ನು ನೀಡಿ ಸತ್ಕರಿಸಲಾಯಿತು.
ಲಕ್ಷ್ಮೀಸೇನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಧಶರಥ ಶೆಟ್ಟಿ, ಪ.ಪಂ.ಅಧ್ಯಕ್ಷ ಅಶೋಕ ಅಂಗಡಿ, ಧರ್ಮಸ್ಥಳ ತಾಲೂಕಾ ಯೋಜನಾಧಿಕಾರಿ ಮಹೇಶ್ವರಪ್ಪ ಜಿ., ಶೀತಲ ಬೇಡಕಿಹಾಳೆ, ಬಾಹುಬಲಿ ಪಾಟೀಲ, ಆರ್.ಎಸ್.ಶಿರಗಾಂವೆ, ಬಿ.ಎಸ್.ಗಡ್ಡೆ, ಫಾರೂಕ ಮೊಮಿನ, ರಾಜು ತಳವಾರ, ಬಿ.ಎನ್.ಬಂಡಗಾರ, ಕುಂತಿನಾಥ ಮಗದುಮ್ಮ, ಪುಟ್ಟು ಸರ್ಕಾರ, ಮಹಾವೀರ ಪಾಟೀಲ, ಸೇರಿದಂತೆ ಅನೇಕರು ಇದ್ದರು.

ಗಣೇಶ ಚತುರ್ಥಿ ಪ್ರಯುಕ್ತ 265 ಹೆಚ್ಚುವರಿ ಸಾರಿಗೆ ಸೌಲಭ್ಯ

ಹಾವೇರಿ. : ಗಣೇಶ ಚತುರ್ಥಿಯ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳಲು ಅನುಕೂಲವಾಗುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಹುಬ್ಬಳ್ಳಿ, ದಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 265 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ವಾರಾಂತ್ಯವಾದ ದಿನಾಂಕ 22-08-2025 ರಂದು ಶುಕ್ರವಾರ, ದಿ. 23-08-2025 ರಂದು ಬೆನಕನ ಅಮವಾಸ್ಯೆ / ನಾಲ್ಕನೇ ಶನಿವಾರ, ದಿನಾಂಕ. 24-08-2025 ರಂದು ಭಾನುವಾರ, ದಿನಾಂಕ. 26-08-2025 ರಂದು ಸ್ವರ್ಣಗೌರಿ ವ್ರತ ಮತ್ತು ದಿನಾಂಕ. 27-08-2025 ರಂದು ಗಣೇಶ ಹಬ್ಬವಿರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ಊರುಗಳಿಗೆ ತೆರಳಲುಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಬೆಂಗಳೂರಿನಿಂದ ರಾಜ್ಯ/ಅಂತರರಾಜ್ಯ ವಿವಿಧ ಸ್ಥಳಗಳಿಗೆ ತೆರಳಲು ದಿನಾಂಕ 22-08-2025 ರಿಂದ 26-08-2025 ರ ವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಬ್ಬ ಮುಗಿದ ನಂತರ ದಿನಾಂಕ 27-08-2025 ಮತ್ತು ನಂತರ ದಿನಗಳಂದು ಪ್ರಮುಖ ಸ್ಥಳಗಳಿಗೆ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುವುದು. ಸಾರ್ವಜನಿಕರು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರೋಗ್ಯ ಕೇಂದ್ರ ಸಕಲರ ಅರೋಗ್ಯ ಸಂಜೀವಿನಿ ಯಾಗಲಿ : ಶಾಸಕ ರಮೇಶ ಜಾರಕಿಹೊಳಿ

ಗೋಕಾಕ: ಸಮುದಾಯ ಅರೋಗ್ಯ ಕೇಂದ್ರ ಸಕಲರ ಅರೋಗ್ಯ ಸಂಜೀವಿನಿ ಯಾಗಲಿ. ವೈದ್ಯರು ಸಿಬ್ಬಂದಿ ದಕ್ಷತೆಯಿಂದ ರೋಗಿಗಳ ಸೇವೆ ಮಾಡಿ ಎಂದು ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು, ಗುರುವಾರ ಬೆಳಗಾವಿ ಜಿಲ್ಲಾ ಪಂಚಾಯತಿ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕೋಡಿ ಅಪರ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜನಿಯರಿಂಗ್ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ ಅಂಕಲಗಿಯಲ್ಲಿ ಮೇಲ್ದರ್ಜೆಗೇರಿಸಲಾದ 30ಹಾಸಿಗೆಗಳ ಸಮುದಾಯ ಅರೋಗ್ಯ ಕೇಂದ್ರದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಕುಂದರನಾಡು ನನ್ನ ನೆಚ್ಚಿನ ನೆಲ. ಇಲ್ಲಿಯ ಜನರ ಪ್ರೀತಿ, ವಿಶ್ವಾಸ ನನ್ನ ಹೃದಯದಲ್ಲಿದೆ. ಇಲ್ಲಿಯ ಜನರ ಸಧೃಢ ಅರೋಗ್ಯ ನನ್ನ ಪ್ರಮುಖ ಧ್ಯೇಯವಾಗಿದೆ. ಇಲ್ಲಿ ಕೊರತೆ ಇರುವ ಆಸ್ಪತ್ರೆ ಒಂದು ದೊಡ್ಡ ಆಸ್ಪತ್ರೆಯಾಗಬೇಕು ಎಂಬುದು ನನ್ನ ಬಯಕೆಯಗಿತ್ತು. ಅದು ಈಗ ನೆರವೇರಿದೆ. ಆರೋಗ್ಯ

ಇಲಾಖೆಯಲ್ಲಿ ಅತ್ಯುತ್ತಮ ಅರೋಗ್ಯ ಸೇವಾ ಕ್ಷೇತ್ರ ನಮ್ಮದಾಗಬೇಕು. ಬರೀ ಆಸ್ಪತ್ರೆ ಕಟ್ಟಡ ಇದ್ದರೆ ಧ್ಯೇಯ ಪೂರ್ಣವಾಗದು. ಆಸ್ಪತ್ರೆಗೆ ತಕ್ಕಂತೆ ಸಿಬ್ಬಂದಿ ಇರಬೇಕು. ಆಗ ಅದು ಸಾರ್ಥಕಗೊಳ್ಳುವದು. ಈ ಕಾರ್ಯದಲ್ಲಿ ನಮ್ಮ ಕ್ಷೇತ್ರದ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇವೆ ಅತ್ಯಂತ ಶ್ಲಾಘನೀಯ ಎಂದರಲ್ಲದೆ ಸನ್ಮಾನಿಸಿ ಗೌರವಿಸಿದ ಕುಂದರನಾಡ ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಅಭಿಮಾನಿಗಳಿಗೆ ಧನ್ಯವಾದ ಹೇಳಿದರು.

ಅಕ್ಕತಂಗೇರಹಾಳದ ದುರ್ಗಾ ದೇವಸ್ಥಾನದಲ್ಲಿ ನೂತನ ವಾಣಿಜ್ಯ ಮಳಿಗೆಗಳು ಮತ್ತು ಕಲ್ಯಾಣ ಮಂಟಪ ಗಳನ್ನು ಉದ್ಘಾಟಿಸಿ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿ ಐ ಪಿ ಗಡಾದ ಪ್ರವಾಸ್ತಾವಿಕವಾಗಿ ಮಾತನಾಡಿದರು.

ಅಂಕಲಗಿ ಅಡವಿಸಿದ್ದೇಶ್ವರ ಮಠದ ಅಮರಸಿದ್ಧೇಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ವೈದ್ಯಾಧಿಕಾರಿಗಳಾದ ಎಸ್ ಎಸ್ ಗಡೇದ, ಎಮ್ ಎಸ್ ಕೊಪ್ಪದ, ಡಾ. ರವೀಂದ್ರ ಆಂಟೀನ್, ಇಮ್ರಾನ ಅಂಬಿ, ಭೀಮಗೌಡ ಪೋಲಿಸಗೌಡರ ಸೇರಿದಂತೆ ಕುಂದರನಾಡ ವಿವಿಧ ಗ್ರಾಮಗಳ ಅಭಿಮಾನಿಗಳು, ಅರೋಗ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು. ಇಲಾಖೆಯ ಆರ್ ಜಿ ಬಸ್ಸಾಪೂರ ಸ್ವಾಗತಿಸಿದರು. ಬಸನಗೌಡಾ ಈಶ್ವರಪ್ಪಗೋಳ ನಿರೂಪಿಸಿದರು. ಮಲ್ಲವ್ವಾ ನಾಯಿಕ ವಂದಿಸಿದರು.

ತಾಲೂಕಾ ಮಟ್ಟದ ದಸರಾ ಕ್ರೀಡಾಕೂಟ ಉದ್ಘಾಟನೆ

ಕ್ರೀಡೆಯಲ್ಲಿ ಸೋಲು-ಗೆಲವು ಸಮಾನಾಗಿ ಸ್ವೀಕರಿಸಿ-ಕವಡಿ

ತಾಳಿಕೋಟೆ, ಕ್ರೀಡೆ ಎಂಬುದು ದೈಹಿಕವಾಗಿ, ಮಾನಸಿಕವಾಗಿ ಮನುಷ್ಯನನ್ನು ಸದೃಡಗೊಳಿ ಸುವಂತಹದ್ದಾಗಿದೆ ಕ್ರೀಡೆಯಲ್ಲಿ ಭಾಗವಹಿಸುವದರಿಂದ ಉತ್ತಮ ಆರೋಗ್ಯವಂತರಾಗಿ ಬಾಳಲು ಸಾಧ್ಯವಾಗಲಿದೆ ಎಂದು ತಾಲೂಕಾ ದೈಹಿಕ ಶಿಕ್ಷಣ ಪರಿವಿಕ್ಷಕರಾದ ಬಿ.ವಾಯ್.ಕವಡಿ ಅವರು ಹೇಳಿದರು.

ಗುರುವಾರರಂದು ತಾಲೂಕಿನ ಮೈಲೇಶ್ವರ ಕ್ರಾಸ್‌ನ ಬ್ರೀಲಿಯಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮೈದಾನದಲ್ಲಿ ಜಿಲ್ಲಾ ಪಂಚಾಯತ್ ವಿಜಯಪುರ, ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಿಜಯಪುರ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮುದ್ದೇಬಿಹಾಳ, ಇವರ ಸಂಯುಕ್ತ ಆಶ್ರಯದಲ್ಲಿ ವರ್ಪಡಿಸಲಾದ 2025-26ನೇ ಸಾಲಿನ ದಸರಾ ಕ್ರೀಡಾಕೂಟ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಮಕ್ಕಳಲ್ಲಿ ಕ್ರೀಡಾ ಮನೋಭಾವನೆ ಎಂಬುದು ಬೆಳೆಸಿಕೊಳ್ಳಬೇಕಾಗಿದೆ ಶಾಲೆಯಿಂದ ಆಚರಿಯೂ ಕೂಡಾ ಕ್ರೀಡಾಪಟುಗಳು ಅನೇಕ ಸಾಧನೆಗಳನ್ನು ಮಾಡಿ ವಿಶ್ವದಲ್ಲಿಯೇ

ಪರಿಚಯಿಸಿಕೊಂಡಿದ್ದಾರೆ ಈ ದಸರಾ ಕ್ರೀಡಾಕೂಟವು ಎಲ್ಲ ಕ್ರೀಡಾಪಟುಗಳ ಭಾಗವಹಿಸುವದಕ್ಕಾಗಿ ಮತ್ತು ಅವರ ಸಾಧನೆಯನ್ನು ಗುರುತಿಸುವದಕ್ಕಾಗಿ ಅಲ್ಲದೇ ಎಲೆ ಮರೆ ಕಾಯಿಯಂತೆ ಕ್ರೀಡಾಪಟುಗಳಲ್ಲಿ ಅವಿತುಕೊಂಡಿರುವ ಕ್ರೀಡಾ ಸಾಧನೆಯನ್ನು ಸಮಾಜಕ್ಕೆ ಪರಿಚಯಿಸಿ ಕ್ರೀಡಾ ಉತ್ಸಾಹವನ್ನು ತುಂಬುವಂತಹದ್ದಾಗಿದೆ ಕ್ರೀಡೆಯಲ್ಲಿ ಸೋತೆ ಎಂದು ಮಾನಸಿಕವಾಗಿ ಕುಗ್ಗುವದು ಬೇಡಾ ಗೆದ್ದೆ ಎಂಬ ಅಹಂಭಾವ ಬೇಡಾ ಮುಂದೊಂದು ದಿನ ಸೋಲೆ ಗೆಲುವಿನ ಸೋಪಾನವಾಗಲಿದೆ ಎಂದರು.

ಇನ್ನೋರ್ವ ಬ್ರೀಲಿಯಂಟ್ ಶಾಲಾ ಕಾರ್ಯದರ್ಶಿಯಾದ ಎಂ.ಬಿ.ಮಡಿವಾಳರ ಅವರು ಮಾತನಾಡಿ ಮೈದಾನಕ್ಕಿಳಿಯುವ ಕ್ರೀಡಾಪಟುಗಳು ಸ್ಪರ್ಧಾತ್ಮಕ ಮನೋಭಾವನೆ ಹೊಂದಿರಬೇಕು. ಅವರಲ್ಲಿರುವ ಸ್ಪರ್ಧಾತ್ಮಕ ಭಾವನೆ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಲಿದೆ ವಯಸ್ಸಿನ ಮಿತಿ ಇಲ್ಲದೇ ನಡೆಯುವ ಈ ದಸರಾ ಕ್ರೀಡಾಕೂಟದಲ್ಲಿ ಎಲ್ಲ ಕ್ರೀಡೆಗಳಿಗೆ ಪ್ರೋತ್ಸಾಹಿಸುವಂತಹ ಕೆಲಸ ಆಗಲಿದೆ ಕ್ರೀಡಾ ಮನೋಭಾವನೆಯಿಂದ ಆಟವನ್ನು ಆಡಿ ಸೋಲು ಗೆಲವು ಎಂಬುದು ಸಾಮಾನ್ಯವಾಗಿದೆ ಅದನ್ನು ಸಮಾನಾಗಿ ಸ್ವೀಕರಿಸಿಕೊಂಡು ಸೋಲು ಗೆಲುವಿನ ಸೋಪಾನ ಎಂಬ ತತ್ವದಡಿಯಲ್ಲಿ ಎಲ್ಲರೂ ಕ್ರೀಡೆಯಲ್ಲಿ ಆಟವನ್ನು ಆಡಬೇಕೆಂದರು.

ಸಮಾರಂಭದಲ್ಲಿ ಕ್ರೀಡಾಜ್ಯೋತಿಯನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಟಿ.ವಜ್ಜಲ ಅವರು ಸ್ವೀಕರಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಬ್ರೀಲಿಯಂಟ್ ಶಾಲಾ ಉಪಾಧ್ಯಕ್ಷ ಆರ್.ಬಿ.ನಡುವಿನಮನಿ ಅವರು ಕ್ರೀಡಾ ಧ್ವಜಾರೋಹಣ ನೇರವೇರಿಸಿದರು.

ಈ ಕ್ರೀಡಾಕೂಟದಲ್ಲಿ ಅಥ್ಲೇಟಿಕ್, ವ್ಹಾಲಿಬಾಲ್, ಪುಟಬಾಲ್, ಖೋಖೋ, ಕಬ್ಬಡ್ಡಿ, ಥ್ರೋಬಾಲ್, ಯೋಗಾಸನ, ಒಳಗೊಂಡು ಅನೇಕ ಕ್ರೀಡೆಗಳನ್ನು ಆಡಿಸಲಾಯಿತು. ವೇದಿಕೆಯ ಮೇಲೆ ಮುದ್ದೇಬಿಹಾಳ ಯುವಜನ ಸಬಲಿಕರಣ ಇಲಾಖೆಯ ಸುರೇಶ ಆಲೂರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ದೈಹಿಕ ಶಿಕ್ಷಕರ ಸಂಘದ ಪ್ರಾಥಮಿಕ ಶಾಲಾ ಜಿಲ್ಲಾ ಸಂಘಟನಾ ಕಾರ್ಯದರ್ಶಿ ರವಿ ಮರೇಕೂರ, ದೈಹಿಕ ಶಿಕ್ಷಕರ ಸಂಘದ ತಾಲೂಕಾ ಅಧ್ಯಕ್ಷ ರಾಹುಲ್ ಪೂಜಾರಿ, ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ.ಸಜ್ಜನ, ಎಂ.ಎಸ್. ರಾಯಗೊಂಡ, ಎಚ್.ಎಲ್.ಬಜಂತ್ರಿ, ವಿಶ್ವನಾಥ ಪಾಟೀಲ, ಕವಡಿಮಟ್ಟಿ, ಹಾಗೂ ವಿವಿಧ ಶಾಲಾ ದೈಹಿಕ ಶಿಕ್ಷಕರು ಮೊದಲಾದವರು ಉಪಸ್ಥಿತರಿದ್ದರು.

ಉಪನ್ಯಾಸಕರ ನೇಮಕಾತಿಗೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ

ಜಮಖಂಡಿ: ರಾಜ್ಯಸರ್ಕಾರ ಉಪನ್ಯಾಸಕರ ನೇಮಕಾತಿಯಲ್ಲಿ ದೃಢವಾದ ನಿರ್ಧಾರ ತೆಗೆದುಕೊಳ್ಳದೆ ವಿದ್ಯಾರ್ಥಿಗಳ ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸುತ್ತಿರುವದನ್ನು ಖಂಡಿಸಿ, ಪದವಿಹಂತದಲ್ಲಿ ಖಾಯಂ ಅಥವಾ ಅತಿಥಿ ಉಪನ್ಯಾಸಕರ ನೇಮಕಾತಿಗೆ ಆಗ್ರಹಿಸಿ ಎಬಿವಿಪಿ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ನಗರದ ದೇಸಾಯಿ ವೃತ್ತದಲ್ಲಿ ಶುಕ್ರವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿ ಉಪತಹಸೀಲ್ದಾರ ಬಿದರಿ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯದ 432 ಪದವಿ ಕಾಲೇಜುಗಳಲ್ಲಿ 6 ಸಾವಿರ ಖಾಯಂ ಉಪನ್ಯಾಸಕರ ಪೈಕಿ 3 ಸಾವಿರಕ್ಕೂ ಹೆಚ್ಚು ಜನ ಉಪನ್ಯಾಸಕರು ನಿವೃತ್ತರಾಗಿದ್ದಾರೆ. ಪದವಿಹಂತದಲ್ಲಿ ಉಪನ್ಯಾಸಕರ ಕೊರತೆ ಉಂಟಾಗಿದ್ದು ರಾಜ್ಯ ಸರ್ಕಾರ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸನ್ 2025-26ನೇ ಸಾಲಿನಲ್ಲಿ ಖಾಲಿವಿರುವ 12 ಸಾವಿರ ಅತಿಥಿ ಉಪನ್

ಮೊದಲು ದೇಶ ನಂತರ ಧರ್ಮ; ಜೈನ ಮುನಿ ಕುಲರತ್ನಭೂಷಣ ಮಹಾರಾಜರು

ರಬಕವಿ– : ಧರ್ಮಸ್ಥಳವು ನಮ್ಮೆಲ್ಲರ ಪುಣ್ಯಕ್ಷೇತ್ರ, ಯಾರೋ ಷಡ್ಯಂತ್ರ ಮಾಡಿ ಇಲ್ಲ ಸಲ್ಲದ ಆರೋಪಗಳನ್ನು ಮಾಡಿ ಧರ್ಮವನ್ನು ಒಡೆಯುವ ಕೆಸಲ ಮಾಡುತ್ತಿರುವುದು ಖಂಡನೀಯ. ಮೊದಲು ದೇಶ ಉಳಿಸೋಣ ನಂತರ ಧರ್ಮವನ್ನು ಕಾಪಾಡೋಣ ಎಂದು ಜೈನ ಮುನಿ ಆಚಾರ್ಯ ಶ್ರೀ ಕುಲರತ್ನಭೂಷಣ ಮಹಾರಾಜರು ಹೇಳಿದರು.

ಗುರುವಾರ ಧರ್ಮಸ್ಥಳ ಭಕ್ತರ ಅಭಿಮಾನಿ ವೇದಿಕೆ ತೇರದಾಳ ಹಾಗೂ ರಬಕವಿ ಬನಹಟ್ಟಿ ತಾಲೂಕಿನ ಸಮಸ್ತ 34 ಸರ್ವ ಧರ್ಮಿಯರು, ಮಠಾಧೀಶರ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಹಿಂದುಗಳಿಗಾಗಿರುವ ಏಕೈಕ ದೇಶ ಭಾರತವಾಗಿದ್ದು, ಅಲ್ಲಿ ಅನೇಕ ಧರ್ಮಗಳಿವೆ ಪವಿತ್ರ ಹಿಂಧೂ ಧರ್ಮವನ್ನು ಒಡೆಯುವ ಹುನ್ನಾರ ಮಾಡಿದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಬೇಕೆಂದರು.

ಶಾಸಕ ಸಿದ್ದು ಸವದಿ ಮಾತನಾಡಿ, ಹೇಡಿಗಳು ಧರ್ಮ ಧರ್ಮಗಳ ನಡುವೆ ಬಿನ್ನಾಭಿಪ್ರಾಯಗಳನ್ನು ಹುಟ್ಟುಹಾಕಿ ಪುಣ್ಯಕ್ಷೇತ್ರ ಧರ್ಮಸ್ಥಳದ ಹೆಸರು ಕೆಡಿಸಲು ಮಾಡಿದವರು ಕೆಲವೇ ದಿನಗಳಲ್ಲಿ ಸರ್ವನಾಶವಾಗುತ್ತಾರೆ. ರಾಜ್ಯದ ಅನೇಕ ಬಡಜನರಿಗೆ ಮಹಿಳೆಯರ ಸ್ವಾವಲಂಬನೆಗೆ ಧನಸಹಾಯ ಮಾಡುತ್ತಾ ಪುಣ್ಯದ ಕೆಲಸ ಮಾಡುವ ಧರ್ಮಾಧಿಕಾರಿಗಳಿಗೆ ಮಸಿ ಬಳಿಯುವವರಿಗೆ ಮಂಜುನಾಥ ತಕ್ಕ ಪಾಠ ಕಲಿಸುತ್ತಾನೆ. ಅವಮಾನಿಸುವ ಮುಸುಕುದಾರಿಗಳು ದೇಶಮೂಲೆ ಮೂಲೆಯಲ್ಲಿದ್ದಾರೆ. ಹಿಂದೂ ಹಾಗೂ ಜೈನ ಸಮೂದಾಯವರ ಅವಮಾನಿಸುವ ಕೀಚಕ ಅನಾಮಿಕ ಹೇಳಿಕೆ ಪ್ರಕಾರ ಆಸೆ ಆಮೀಷವೊಡ್ಡಿ ಇಂತಹ ಕೃತ್ಯಕ್ಕೆ ಬೆಂಬಲಿಸುವ ಮತ್ತು ಎಸ್‌ಐಟಿ ನೇಮಿಸಿದವರು ಸಾರ್ವಜನಿಕರಿಗೆ ಕ್ಷಮೆ ಕೇಳಬೇಕು ಎಂದು ಶಾಸಕ ಸವದಿ ಅಗ್ರಹಿಸಿದರು.

ಬಸವರಾಜೇಂದ್ರ ಶರಣರು, ಗುರುಸಿದ್ಧೇಶ್ವರಶ್ರೀಗಳು ಮಾತನಾಡಿದರು. ನಂತರ ತಹಸೀಲ್ದಾರ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಲಾಯಿತು. ಬೆಳಿಗ್ಗೆ 11 ಕ್ಕೆ ರಬಕವಿ ಹೊಸ ಬಸ್ ನಿಲ್ದಾಣದಿಂದ ಹೊರಟ ಪ್ರತಿಭಟನಾ ಮೆರವಣಿಗೆ

ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕೊನೆಗೆ ಬನಹಟ್ಟಿ ಪೊಲೀಸ್ ಠಾಣೆಎದಿರು ಜಮಖಂಡಿ ಕುಡಚಿ ರಾಜ್ಯ ಹೆದ್ದಾರಿ ಬಂದ್ ಮಾಡಿ ಬೃಹತ್ ಸಭೆ ನಡೆಯಿತು. ಒಂದು ಗಂಟೆಗೂ ಕಾಲ ರಸ್ತೆ ತಡೆ ಮಾಡಲಾಯಿತು. ಪ್ರತಿಭಟನೆಯಲ್ಲಿ ತೇರದಾಳ ಹಾಗೂ ರಬಕವಿ ಬನಹಟ್ಟಿ ತಾಲೂಕಿನ ಸರ್ವಧರ್ಮಿಯರು ಭಾಗವಹಿಸಿದ್ದರು. ಪ್ರಮುಖರಾದ ಜೈನ ಧರ್ಮಿಯ ದರ್ಶನ ಭೂಷಣ ಮಹಾರಾಜ, ಜ್ಞಾನಭೂಷಣಮತಿ, ಶಾಂತಿ ಧರ್ಮಭೂಷಣ, ಸತೀಶ ಹಜಾರೆ, ಡಾ. ಮಹಾವೀರ ದಾನಿಗೊಂಡ, ಅಲ್ಲಮ ಪ್ರಭುದೇವವರು, ಧರೆಪ್ಪ ಉಳ್ಳಾಗಡ್ಡಿ, ರಾಮಣ್ಣ ಹುಲಕುಂದ, ಮಹಾದೇವ ಧೂಪದಾಳ, ಪ್ರಭು ಪೂಜಾರಿ, ಸಂಜು ತೇಲಿ, ಆನಂದ ಜುಗಳಿ, ರವಿ ಗಡಾಡ, ಸಂಜು ತೆಗ್ಗಿ, ಪುಷ್ಪದಂತ ದಾನಿಗೊಂಡ, ಸವಿತಾ ಹೊಸೂರ, ಶ್ರೀಶೈಲ ಬೀಳಗಿ, ವೈಷ್ಣವಿ ಬಾಗೇವಾಡಿ, ಮಹಾದೇವ ಕೋಟ್ಯಾಳ, ಸಿದ್ದನಗೌಡ ಪಾಟೀಲ, ಡಾ. ವಿನೋದ ಮೇತ್ರಿ, ಡಾ. ಅಭನಂದನ ಡೋರ್ಲೆ, ಗೌರಿ ಮಿಳ್ಳಿ, ಅಶೋಕ ಅಳಗೊಂಡ, ಬಾಬಾಗೌಡ ಪಾಟೀಲ ಸೇರಿದಂತೆ ಅನೇಕರಿದ್ದರು.

ಬನಹಟ್ಟಿಯಲ್ಲಿ ಪ್ರಜಾಸೌಧಕ್ಕೆ ಸ್ಥಳಾವಕಾಶ ಸೂಕ್ತ

ರಬಕವಿ–ಬನಹಟ್ಟಿ, : ಬನಹಟ್ಟಿಯಲ್ಲಿ ತಾಲ್ಲೂಕಾಡಳಿತ ಭವನ ಪ್ರಜಾಸೌಧ ನಿರ್ಮಾಣ ಮಾಡಲು ನೂಲಿನ ಗಿರಣಿಯ ಹತ್ತಿರದ ಸರ್ವೆ ನಂ.12 ರಲ್ಲಿಯ ಸೋಮವಾರ ಪೇಟೆ ಸಮಸ್ತ ದೈವ ಮಂಡಳದ ನಾಲ್ಕು ಎಕರೆಗಿಂತ ಹೆಚ್ಚು ಪ್ರದೇಶವನ್ನು ಸರ್ಕಾರಕ್ಕೆ ಬಿಟ್ಟು ಕೊಡಲಾಗುವುದೆಂದು ಮಂಡಳದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ತುಂಗಳ ತಿಳಿಸಿದರು.

ಇಲ್ಲಿನ ಭದ್ರನವರ ಕಲ್ಯಾಣ ಮಂಟಪದಲ್ಲಿ ಪ್ರಜಾಸೌಧ ನಿರ್ಮಾಣ ಮಾಡಲು ಹಮ್ಮಿಕೊಂಡ ಸಭೆಯಲ್ಲಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಶಂಕರ ಸೊರಗಾಂವಿ ಮಾತನಾಡಿ, ಈ ಸ್ಥಳ ಕಂದಾಯ ಭೂಮಿಯಾಗಿದ್ದು, ಪ್ರಜಾಸೌಧ ನಿರ್ಮಾಣ ಮಾಡಲು ಯಾವುದೆ ಸಮಸ್ಯೆ ಇಲ್ಲವೆಂದರು.

ನಗರದ ಮುಖಂಡ ಭೀಮಶಿ ಮಗದುಮ್ ಮಾತನಾಡಿ, ಬನಹಟ್ಟಿಯಲ್ಲಿ ಪ್ರಜಾಸೌಧ ನಿರ್ಮಾಣ ಮಾಡುವುದರಿಂದ ತಾಲ್ಲೂಕಿನ ಎಲ್ಲ ಊರಿನ ಮತ್ತು ಗ್ರಾಮೀಣ ಪ್ರದೇಶಗಳ ಜನರಿಗೆ ಅನುಕೂಲವಾಗುವುದು. ನೂಲಿನ ಗಿರಣಿಯ ಹತ್ತಿರದ ಭೂಪ್ರದೇಶ ಅತ್ಯಂತ ಸೂಕ್ತವಾದ ಸ್ಥಳವಾಗಿದೆ.

ಇದು ಕಂದಾಯ ಭೂಮಿಯಾಗಿರುವುದರಿಂದ ಸರ್ಕಾರಕ್ಕೂ ಯಾವುದೇ ತೊಂದರೆಯಾಗುವುದಿಲ್ಲ. ಈಗಾಗಲೇ ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೂಡಾ ಸಲ್ಲಿಸಲಾಗಿದೆ ಎಂದರು.

ಮತ್ತೊರ್ವ ಯುವ ಮುಖಂಡ ರಾಜೇಂದ್ರ ಭದ್ರನವರ ಮಾತನಾಡಿ, ಬನಹಟ್ಟಿ ನಗರವು ದೊಡ್ಡದಾಗಿದ್ದು, ಅತ್ಯಧಿಕ ಜನಸಂಖ್ಯೆಯನ್ನು ಮತ್ತು ಕ್ಷೇತ್ರದಲ್ಲಿ ಅತಿ ಹೆಚ್ಚು ಮತದಾರರನ್ನು ಹೊಂದಿದೆ. ರಬಕವಿ ಬನಹಟ್ಟಿ ನಗರಸಭೆಯ 31 ಸ್ಥಾನಗಳಲ್ಲಿ ಬನಹಟ್ಟಿ ನಗರಕ್ಕೆ 16 ವಾರ್ಡ್ ಗಳು ಬರುತ್ತವೆ. ಇನ್ನೂ ತಾಲ್ಲೂಕಿನ ದೊಡ್ಡ ಗ್ರಾಮಗಳು ಇದೇ ಭಾಗಕ್ಕೆ ಬರುವುದರಿಂದ ಇಲ್ಲಿಯ ಪ್ರಜಾಸೌಧ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ದುಂಡಪ್ಪ ಮಾಚಕನೂರ, ಶಂಕರ ಜುಂಜಪ್ಪನವರ, ಸುರೇಶ ಚಿಂಡಕ, ಶಿವಾನಂದ ಗಾಯಕವಾಡ, ಶ್ರೀಶೈಲ ಬೀಳಗಿ, ಬಾಳು ಗಣೇಶನವರ ಮಾತನಾಡಿದರು.

ಸಿದ್ದನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಶ್ರೀಶೈಲ ಧಬಾಡಿ, ಶ್ರೀಪಾದ ಬಾಣಕಾರ, ಬದ್ರಿನಾರಾಯಣ ಭಟ್ಟಡ, ಗಂಗಪ್ಪ ಮುಗತಿ, ಮಲ್ಲಿಕಾರ್ಜುನ ಬಾಣಕಾರ, ಡಾ.ಪಟ್ಟಣ, ಬಸವರಾಜ ಭದ್ರನವರ, ಬಸವಂತ ಜಾಡಗೌಡ, ಸಿದ್ರಾಮಪ್ಪ ಸವದತ್ತಿ, ಹುಮಾಯುನ ಮುಲ್ಲಾ, ಗಿರೀಶ ಕಾಡದೇವರ, ಪ್ರಶಾಂತ ಕೊಳಕಿ, ಶ್ರೀಶೈಲ ಯಾದವಾಡ, ಶಿವು ಗುಂಡಿ, ಚಂದ್ರಶೇಖರ ಮಿರ್ಜಿ, ಸುಭಾಸ ಹನಗಂಡಿ, ಮಲ್ಲಣ್ಣ ಕಕಮರಿ, ಶಂಕರ ಕೆಸರಗೊಪ್ಪ, ಶಂಕರ ಟಿರಕಿ, ಮಹಾಶಾಂತ ಶೆಟ್ಟಿ ಸೇರಿದಂತೆ ಅನೇಕರು ಇದ್ದರು.

ಸಾರ್ವಜನಿಕರ ಗಮನಕ್ಕೆ

ಗದಗ : ಗದಗ ಬೇಟಗೆರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲಿಕರ ಗಮನಕ್ಕೆ ಈ ಆಸ್ತಿ ಮೋಟೇಶನ್ ಅಡಿಯಲ್ಲಿ ಬರುವ ಅರ್ಜಿಗಳನ್ನು ಭೌತಿಕವಾಗಿ ಅರ್ಜಿಗಳನ್ನು ಸ್ವೀಕರಿಸುವುದಿಲ್ಲಾ.

ಇ ಆಸ್ತಿ ತಂತ್ರಾಂಶದಲ್ಲಿ ಸಿಟಿಜನ್ ಲಾಗಿನ್ ಮತ್ತು ಕರ್ನಾಟಕ ಓನ್ ಕೇಂದ್ರಗಳ ಮೂಲಕ ಮಾತ್ರ ಇ–ಆಸ್ತಿ (ನಮೂನೆ–03) ಮತ್ತು ಮೋಟೇಶನ್ ಖಾತಾ ಬದಲಾವಣೆ ಅರ್ಜಿಗಳನ್ನು ಸಾರ್ವಜನಿಕರು ಸಲ್ಲಿಸತಕ್ಕದ್ದು.

ಆನ್ ಲೈನ್ ಮೂಲಕ ಬರುವ ಅರ್ಜಿಗಳನ್ನು ಮಾತ್ರಪರಿಗಣಿಸಲಾಗುವುದು ಮತ್ತು ಡಾಟಾ ಎಂಟ್ರಿ ಆಪರೇಟರ್ ಕಡೆಯಲ್ಲಿ ಸಾರ್ವಜನಿಕರು ಯಾವುದೆ ಅರ್ಜಿಯನ್ನು ನೀಡಬಾರದು ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲಾ ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನಗರಸಭೆಯು ಯಾವುದೆ ಮಧ್ಯವರ್ತಿಗಳು ಹೊಂದಿರುವುದಿಲ್ಲಾ ಮತ್ತು ಪ್ರೋತ್ಸಾಹಿಸುವುದಿಲ್ಲ. ಮಧ್ಯವರ್ತಿಗಳು ಕಂಡುಬಂದರೆ ಸೂಕ್ತ ಕ್ರಮ ಜರಿಗಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಕಾರಣ ಸಾರ್ವಜನಿಕರು ಮತ್ತು ತಮ್ಮ ಅರ್ಜಿಗಳನ್ನು ಆನ್ ಲೈನ್ ಮೂಲಕ ಸಲ್ಲಿಸಿ ನಿಗಧಿತ ಅವಧಿಯಲ್ಲಿ ಸೇವೇಯನ್ನು ಪಡೆಯಲು ತಿಳಿಸಿದೆ ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಉಚಿತ ಆರೋಗ್ಯ ಹಾಗೂ ರಕ್ತದಾನ ಶಿಬಿರ

ಗೋಕಾಕ : ವಿವಿಧ ರೋಗಗಳ ಉಚಿತ ಆರೋಗ್ಯ ತಪಾಸಣೆಯೊಂದಿಗೆ ರಕ್ತದಾನ ಶಿಬಿರವು ಇದೇ ದಿನಕ್ಕೆ 24ರಂದು ಸಮೀಪದ ಸುಣಧೋಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮುಂಜಾನೆ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಗೋಕಾಕ ಹಾಗೂ ಮೂಡಲಗಿ ವಲಯಗಳ ಲೈನ್ಸ್ ಕ್ಲಬ್ ಹಾಗೂ ರೋಟರಿ ಕ್ಲಬ್ ಹಾಗೂ ಸುಣಧೋಳಿ ಗ್ರಾಮದ ವೈದ್ಯರಾದ ಡಾಕ್ಟರ್ ಬಿ.ಎಸ್. ಮದಭಾಂವಿ ಅವರ ಮುಂದಾಳತ್ವದಲ್ಲಿ ಆರೋಗ್ಯ ಇಲಾಖೆ, ನಿವೃತ್ತ ಸರ್ಕಾರಿ ನೌಕರರ ಸಂಘ ಹಾಗೂ ನುರಿತ ವೈದ್ಯರ ತಂಡದ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ಜರುಗಲಿದ್ದು, ಕಣ್ಣಿನ ಪೊರೆ ತಪಾಸಣೆ, ನೇತ್ರೆ ಶಸ್ತ್ರ ಶಿಕಿಸ್ತಾ ಶಿಬಿರ, ಚರ್ಮರೋಗ, ಹೃದಯ ಕಾಯಿಲೆ ,ಬಿಪಿ ಮತ್ತು ಶುಗರ್ ತಪಾಸನೆ ಹಾಗೂ ಬೃಹತ್ ರಕ್ತದಾನ ಶಿಬಿರ ಸೇರಿದಂತೆ ಮುಂತಾದ ಕಾಯಿಲೆಗಳ ಬಗ್ಗೆ ತಪಾಸಣೆ ಮಾಡಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ಶಿಬಿರದಲ್ಲಿ ತಜ್ಞ ವೈದ್ಯರು ಭಾಗವಹಿಸಲಿದ್ದಾರೆ.

ಶಾಸಕ ಬಾಲಚಂದ್ರ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸುಣಧೋಳಿ ಗ್ರಾಮದ ಶಿವಾನಂದ ಮಹಾಸ್ವಾಮಿಗಳು ಅವಧೂತ ಚಿದಾನಂದ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು.

ಕಲಾವಿದರ ಸಹಾಯಾರ್ಥ ನಾಟಕ ಪ್ರದರ್ಶನ

ಗೋಕಾಕ : ಜೇವರ್ಗಿಯ ವಿಶ್ವಜ್ಯೋತಿ ಶ್ರೀ ಪಂಚಾಕ್ಷರಿ ನಾಟ್ಯ ಸಂಘದ ಹಾಸ್ಯ ಕಲಾವಿದರಾದ ಮಾರುತಿ ಶೆಟ್ಟಿ ಇವರ ಸಹಾಯಾರ್ಥ– ಶನಿವಾರ ದಿನಾಂಕ 30 ರಂದು ಮಧ್ಯಾಹ್ನ 3:15ಕ್ಕೆ ಹಾಗೂ ಸಂಜೆ 6:30ಕ್ಕೆ " ಕುಂಟ ಕೋಣ ಮೂಕ ಜಾಣ" ನಾಟಕವು ಗೋಕಾಕ ನಗರದಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ಸಂಘದ ಒಡೆಯರಾದ ಜೇವರ್ಗಿ ರಾಜಣ್ಣ ಅವರು ತಿಳಿಸಿದ್ದಾರೆ.

ಈ ನಾಟಕದಲ್ಲಿ ಗಿಚ್ಚಿ ಗಿಲಿಗಿಲಿ ಖ್ಯಾತಿಯ ನೀಲಾ ಜೇವರ್ಗಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಸುಜಾತಾ ಜೇವರ್ಗಿ, ಮಾರುತಿ ಶೆಟ್ಟಿ, ಪ್ರಮುಖ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುವರು. ಕಲಾಪೋಷಕರು ಅಂದು ಆಗಮಿಸಿ ರಂಗ ಕಲಾವಿದರಿಗೆ ಸಹಾಯ ನೀಡಬೇಕೆಂದು ಕೋರಿದ್ದಾರೆ.

ಸಮಾಜಕ್ಕೆ ಸಹಕಾರಿ ಕ್ಷೇತ್ರ ಮಹತ್ವದ ಪಾತ್ರವಿದೆ



ರಬಕವಿ–ಬನಹಟ್ಟಿ, : ರೈತ, ಕೂಲಿ ಕಾರ್ಮಿಕ ಸೇರಿದಂತೆ ಸಮಾಜಕ್ಕೆ ಸಹಕಾರಿ ರಂಗದ ಕೊಡುಗೆ ಅಪಾರವಾಗಿದೆ. ಅದರಂತೆ ಜಗದಾಳ ಗ್ರಾಮದಲ್ಲಿ ಪ್ರತಿಯೊಬ್ಬ ಗ್ರಾಮಸ್ಥನಿಗೂ ಪ್ರಯೋಜನ ಪಡೆದಿರುವದು ವಿಶೇಷವೆಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ ಹೇಳಿದರು.

ಗುರುವಾರ ಜಗದಾಳ ಗ್ರಾಮದ ಪಿಕೆಪಿಎಸ್‌ನ 'ಅಮೃತ ಮಹೋತ್ಸವ'ದಲ್ಲಿ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ಏಷ್ಯಾದಲ್ಲಿಯೇ ಸಹಕಾರಿ ಕ್ಷೇತ್ರ ಪರಿಚಯಿಸಿದ ಹೆಮ್ಮೆ ಗದಗನ ಗದುಗಿನಾಳದ ಸಿದ್ಧನಗೌಡ ಪಾಟೀಲರಿಗೆ ಸಲ್ಲುತ್ತದೆ. ಅದರಂತೆ ರಾಜ್ಯದಲ್ಲಿಯೇ ಅತಿ ಹೆಚ್ಚು ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ವಿತರಿಸಿದ ಹೆಮ್ಮೆ ಬಿಡಿಸಿಸಿ ಬ್ಯಾಂಕ್‌ನದ್ದೆಂದರು. ಸಂಪನ್ಮೂಲ ಹೆಚ್ಚಾದಂತೆ ಸರ್ಕಾರದ ನಿಯಮದಡಿ ಪ್ರತಿ ರೈತನಿಗೂ 5 ಲಕ್ಷ ರೂ. ಶೂನ್ಯ ಬಡ್ಡಿಯಲ್ಲಿ ಸಾಲ ಒದಗಿಸುವ ಬಯಕೆ ನಮ್ಮದಾಗಿದೆಯೆಂದರು.

ಗೋದಾಮು ಉದ್ಘಾಟಿಸಿದ ಶಾಸಕ ಸಿದ್ದು ಸವದಿ ಮಾತನಾಡಿ, ವೀಳ್ಯದೆಲೆ, ದ್ರಾಕ್ಷಿ, ಅರಿಷಿಣ ಹಾಗು ಕಬ್ಬು ಸೇರಿದಂತೆ ಸಮಗ್ರ ಕೃಷಿಯಿಂದ ಜಗದಾಳ ಗ್ರಾಮವು ಸಿರಿವಂತಿಕೆಯನ್ನು ಹೊಂದಿದೆ. ಎಲ್ಲ ರೈತರೂ ಮಾದರಿಯಾಗಿ ಅಭಿವೃದ್ಧಿ ಹೊಂದುತ್ತಿರುವದು ವಿಶೇಷವಾಗಿದ್ದು, ಇದೇ ಕಾರಣದಿಂದ ಪಿಕೆಪಿಎಸ್ 3 ಲಕ್ಷ ರೂ.ವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ವಿತರಿಸುತ್ತಿರುವದೇ ಸಾಕ್ಷಿಯೆಂದರು.

ಸಂಘದ ಅಧ್ಯಕ್ಷ ಸುಭಾಸ ಉಳ್ಳಾಗಡ್ಡಿ ಮಾತನಾಡಿ, 75 ವರ್ಷಗಳಿಂದ ಸಾಕಷ್ಟು ಸದಸ್ಯರು ಈ ಸಂಘದ ಅಭಿವೃದ್ಧಿಗೆ ಶ್ರಮಿಸಿದ್ದು, ಇದೀಗ ಹೆಮ್ಮರವಾಗಿ ಬೆಳೆದಿರುವದು ಸಂತಸ ತಂದಿದೆಯೆಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಹಿರೇಮಠದ ಶರಣಬಸವ ಶಿವಾಚಾರ್ಯರು, ಬಬಲಾದಿಯ ಬಸಯ್ಯ ಮಹಾಸ್ವಾಮೀಜಿ ವಹಿಸಿದ್ದರು. ಅತಿಥಿಗಳಾಗಿ ಸಿದ್ಧನಗೌಡ ನೀಲಪ್ಪನವರ, ದಾನಯ್ಯ ಹಿರೇಮಠ, ವಿ.ಮಹೇಶ್ವರಪ್ಪ, ಮಂಜುನಾಥ ರೆಡ್ಡಿ ಎಸ್. ರಾಮನಗೌಡ ಪಾಟೀಲ, ಎಂ.ಎಂ. ಮರನೂರ, ಭರತೇಶ ಹರವಿ, ಬಾಬಾಗೌಡ ಪಾಟೀಲ, ಪುಂಡಲೀಕಕ ಪಾಲಭಾಂವಿ, ಅನ್ನಪೂರ್ಣ ಹೇಮವಾಡಗಿ, ಶಿವಾಜಿ ಸೊರಗಾಂವಿ ಉಪಸ್ಥಿತರಿದ್ದರು.

ಇದೇ ಸಂದರ್ಭ ಸಂಘದ ಮಾಜಿ ಅಧ್ಯಕ್ಷರಾದ ಮಲ್ಲಪ್ಪ ಹಳ್ಳೂರ, ಶಿವಪ್ಪ ಚಿಂಚಲಿ, ಗಂಗಪ್ಪ ಉಳ್ಳಾಗಡ್ಡಿ, ಅಡಿವೆಪ್ಪ ಬಿ.ಪಾಟೀಲ, ಶೇಖಿರ ನೀಲಕಂಠ, ಭೀಮಪ್ಪ ಬಿ.ಪಾಟೀಲ, ನಾಮದೇವ ಉಪ್ಪಾರ, ಬಾಳಪ್ಪ ದಡ್ಡಿಮನಿಯವರನ್ನು ಸನ್ಮಾನಿಸಲಾಯಿತು.

ಎಂಆರ್‌ಎನ್ ಫೌಂಡೇಶನ್ ಕಾರ್ಯ ಶ್ರೇಷ್ಠವಾದುದು



ರಬಕವಿ–ಬನಹಟ್ಟಿ, : ಮುಧೋಳದ ಎಂ.ಆರ್. ಎನ್ ಫೌಂಡೇಶನ್ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರಿಗೆ ವೈದ್ಯಕೀಯ ಸೇವೆ ಸೇರಿದಂತೆ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ನಿರ್ವಹಿಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ಭೀಮಶಿ ಮಗದುಮ್ ತಿಳಿಸಿದರು.

ಅವರು ಗುರುವಾರ ಇಲ್ಲಿನ ಎಸ್ ಟಿ ಸಿ ಕಾಲೇಜು ಮತ್ತು ಮುಧೋಳದ ಎಂ.ಆರ್.ಎನ್ ಫೌಂಡೇಶನ್ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು. ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ಗೋಪಾಲಕೃಷ್ಣ ಮಾತನಾಡಿ, ಇಂದಿನ ಯುವಕರು ತಂಬಾಕು ಸೇವನೆಯಂತಹ ದುಶ್ಚಟದಿಂದ ದೂರವಿರಬೇಕು. ತಂಬಾಕು ಸೇವನೆ ನಮ್ಮ ಜೀವಕ್ಕೆ ಮಾರಕವಾಗಿದೆ. ನಿಯಮಿತವಾಗಿ ಆರೋಗ್ಯ ತಪಾಸಣೆಯನ್ನು ಪ್ರತಿಯೊಬ್ಬರು ಕೈಗೊಳ್ಳಬೇಕು ಎಂದರು.

ಪ್ರಾಚಾರ್ಯ ಜಿ.ಆರ್.ಜುನ್ನಾಯ್ಕರ್, ಮಂಜುನಾಥ ಬೆನ್ನೂರ, ಈಶ್ವರ ನ್ಯಾಮಗೌಡ, ಗೀತಾ ಗೋಂದಕರ್ ಮಾತನಾಡಿದರು. ಜನತಾ ಶಿಕ್ಷಣ ಸಂಘದ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಪಾಧ್ಯಕ್ಷ ಬಸವರಾಜ ಭದ್ರನವರ, ಗೌರವ ಕಾರ್ಯದರ್ಶಿ ರಾಜಶೇಖರ ಸೋರಗಾವಿ, ಆಡಳಿತ ಮಂಡಳಿಯ ಸದಸ್ಯರಾದ ಎಂ.ಜಿ.ಕೆರೂರ, ಮಲ್ಲಿಕಾರ್ಜುನ ಬಾಣಕಾರ, ಶ್ರೀ ಶೈಲ ಯಾದವಾಡ, ಮಹಾದೇವಿ ಕೊಳಕಿ, ಬಸವರಾಜ ದಲಾಲ, ಡಾ.ರವಿ ಜಮಖಂಡಿ, ಡಾ. ಬಾಲಕೃಷ್ಣ, ಜಿ.ಎಸ್.ಪಾಟೀಲ, ಗಿರೀಶ ಆನಿಖಿಂಡಿ, ಪ್ರಕಾಶ ಕೆಂಗನಾಳ, ಮನೋಹರ ಶಿರಹಟ್ಟಿ, ಗೀತಾ ಸಜ್ಜನ, ರೇಶ್ಮಾ ಗಜಾಕೋಶ ಇದ್ದರು.

ಅಂದಾಜು ನಾಲ್ಕು ನೂರಕ್ಕೂ ಹೆಚ್ಚು ಜನರ ಹೃದಯ ಸಂಬಂಧಿ, ನರರೋಗ, ಮೂತ್ರಪಿಂಡ ಮತ್ತು ಎಲವು ಕೀಳುಗಳ ಕುರಿತು ಉಚಿತ ಚಿಕಿತ್ಸೆಯನ್ನು ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ವೈದ್ಯರು ನಡೆಸಿದರು.

ಮಾದಕ ವಸ್ತುಗಳ ಸುಳಿಯಿಂದ ಯುವಜನಾಂಗವನ್ನು ರಕ್

ಸೆ, 14 ರಂದು ವೀರಶೈವ ಪಂಚಮಸಾಲಿ ಸಂಘ -ರಾಣಿ ಚೆನ್ನಮ್ಮ ಸೊಸೈಟಿಯ ಸಹಯೋಗದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಜಮಖಂಡಿ : ನಗರದಲ್ಲಿ ವೀರಶೈವ ಪಂಚಮಸಾಲಿ ಸಂಘ ಹಾಗೂ ರಾಣಿ ಚೆನ್ನಮ್ಮ ಸೊಸೈಟಿಯ ಸಹಯೋಗದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಸೆ, 14 ರಂದು ಮುಂಜಾನೆ 10 ಗಂಟೆಗೆ ಮೈಗೂರ ರಸ್ತೆಯ ಪಂಚಮಸಾಲಿ ಕಲ್ಯಾಣ ಮಂಟಪದಲ್ಲಿ ಜರುಗಲಿದೆ ಎಂದು ಪಂಚಮಸಾಲಿ ಅಧ್ಯಕ್ಷ ಪಿ.ಎನ್.ಪಾಟೀಲ ಹೇಳಿದರು.

ನಗರದ ರಾಣಿ ಚನ್ನಮ್ಮ ಸೊಸೈಟಿಯಲ್ಲಿ ವೀರಶೈವ ಪಂಚಮಸಾಲಿ ಸಮಾಜದಿಂದ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚಮಸಾಲಿ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು. ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಶೇಕಡಾ 85 ರಷ್ಟು ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರಥಮ ಸ್ಥಾನ ಬಹುಮಾನ 15 ಸಾವಿರ, ದ್ವಿತೀಯ ಬಹುಮಾನ 10 ಸಾವಿರ, ತೃತೀಯ ಬಹುಮಾನ 5 ಸಾವಿರ ರೂಪಾಯಿಗಳನ್ನು ನಗದು ಹಣವನ್ನು ನೀಡುವ ಜೊತೆಗೆ ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಸೆ,6 ರ ಒಳಗಾಗಿ ಎಲ್ಲ ಮಕ್ಕಳು ತಮ್ಮ ಮೂಲ ದಾಖಲಾತಿಯಾದ ಅಂಕಪಟ್ಟಿ, ಆಧಾರ ಕಾರ್ಡ, ಪೋಟೋ ಹೀಗೆ ತಮ್ಮ ದಾಖಲಾತಿಗಳನ್ನು ಕೊಟ್ಟು ಹೆಸರು ನೊಂದಾಯಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರಭು ಜನವಾಡ, ಅಪ್ಪಾಸಾಬ ಚೌಗಲಾ, ಮಾಂತೇಶ ನರಸನಗೌಡ, ಆರ್.ಎಸ್.ಬಿರಾದರ, ಬಸು ಬಳಗಾರ, ಪಂಡಿತಪ್ಪ ಜುಲ್ಪಿ, ಕಾಡು ಗಡಾದ, ಈಶ್ವರ ನ್ಯಾಮಗೌಡ, ಮ್ಯಾನೇಜರ್ ಸಂಗು ಐನಾಪೂರ, ಚಂದ್ರಶೇಖರ ಆಲೂರ ಸುದ್ದಿಗೋಷ್ಠಿಯಲ್ಲಿ ಇದ್ದರು.

****

ಭಕ್ತನಾದರೆ ಭೃತ್ಯಾಚಾರದ(ಸೇವಾಭಾವದ) ಅರಿವು ಇರಬೇಕು- ಶಿವಶರಣೆ ನೀಲಮ್ಮತಾಯಿ

ಗದಗ– ಭೃತ್ಯಾಚಾರ(ಸೇವಾಭಾವ)ವಿಲ್ಲದ ಸತ್ಯ ಸದಾಚಾರಕ್ಕೆ ಸಲ್ಲದ ಹೆಸರು ಭಕ್ತರು ವೇಶಭೂಷಣಗಳಿಂದ ಹತ್ತಿ ಹಣ್ಣಿನ ಭಕ್ತಿ ಒಳಗೆ ಹುಳು ಮೇಲೆ ಸಾತ್ವಿಕ ಬಣ್ಣಜ ಕವಚ ಇಂತಿರುವವರು ಭಕ್ತರಾಗಬಲ್ಲರೇ? ಹೀಗೆಂದು ಶರಣೆ ನೀಲಮ್ಮತಾಯಿಯವರು ಶರಣ ಚರಿತಾಮೃತ ಪ್ರವಚನದಲ್ಲಿ ಬಸವಣ್ಣನವರ ಹಾಗೂ ಅಲ್ಲಮ ಪ್ರಭುಗಳ ಮಧ್ಯದಲ್ಲಿ ನಡೆದಿವರ ಸಂವಾದವನ್ನು ಶಿವಶರಣೆ ನೀಲಮ್ಮತಾಯಿಯವರು ಅರ್ಥಪೂರ್ಣವಾಗಿ ವಿವರಿಸಿದರು.

ಶ್ರಾವಣ ಮಾಸದ ಅಂಗವಾಗಿ, ಶ್ರಾವಣ ಮಾಸದಲ್ಲಿ ಒಂದು ತಿಂಗಳು ನಡೆಯುವ ಜ್ಞಾನ ದಾಸೋಹದಲ್ಲಿ ಭಾಗವಹಿಸಿ ಮಾತನಡುತ್ತಾ ಭಕ್ತನಾದರೆ ಕಾಯದಲ್ಲಿ ಭಕ್ತಿ ಇರಬೇಕು. ಗೋಸಂಬಿಯಂತೆ ಭಕ್ತಿ ಒಂದು ರೀತಿ ವರ್ತಿಸುವುದಲ್ಲ. ಭಕ್ತಿಗೆ ಬಣ್ಣವಿಲ್ಲ. ಸತ್ಯಕ್ಕೆ ಯಾವುದೇ ಲೇಪನವಿಲ್ಲ. ಸತ್ಯ ಯಾವಾಗಲೂ ಒಂದೇ. ಸುಳ್ಳಿಗೆ ಸುಳ್ಳು ಸಾವಿರಾರು ಸುಳ್ಳು ಜೋಡಿಸಿ ಹೇಳಲು ಬರುತ್ತೇ. ಆದರೆ ಸತ್ಯಕ್ಕೆ ಹೇಳಲು ಬರುವುದಿಲ್ಲಾ. ಅಹಂ ನ ಬಕ್ತಿಯ ಸಂಭ್ರಮಕ್ಕೆ ಸತ್ಯ ಸ್ಥಿತಿ ಸಮನ್ವಿಸುವುದಿಲ್ಲಾ. ಭಕ್ತಿಯನ್ನು ಮಾತಿನಲ್ಲಿ ನುಡಿದು ಮಲಗಿಸಿದರೆ ಹೇಗೆ ? ಬೆಳೆಯುವ ಭೂಮಿಯಲ್ಲಿ ಪ್ರಳಯದ ಕಸ ಹುಟ್ಟಿದಂತೆ ಭಕ್ತಿಯೊಂದಿಗೆ ಅಹಂ ನ ಕಸ ಬೆಳೆಯಬಾರದು. ವಿಷಗುಂಬಳ ಕಾಯಿ ಹಣ್ಣಾದಂತೆ ಭಕ್ತಿಯಾಗಬಾರದು.

ಬೆಟ್ಟಕ್ಕೆ ಛಳಿಯಾದರೆ ಏನು ಹೊದಿಸಬೇಕು ? ಭಯಲು ಬತ್ತಲೆ ಆದರೆ ಏನನ್ನು ಉಡಿಸಬೇಕು ? ಭಕ್ತನು ಭವಿ ಆದರೆ ಅದೆನನುಪಮಿಸುವೆನಯ್ಯ ಗುಹೇಶ್ವರ ? ಹೀಗೆಂದು ಅಲ್ಲಮ ಪ್ರಭುಗಳು ಬಸವಣ್ಣನವರಿಗೆ ಪ್ರಶ್ನಿಸುತ್ತಾರೆ. ಬರಿದೆ ಭಕ್ತರಾದೇವೆಂದು ಬೆಚ್ಚನೆ ಬೆರೆಯುವ ಹೇಡಿಂಗೆ ನಾನು ಮರಗುವೆ ಕಾಣಾ ಗುಹೇಶ್ವರ ಎಂದು ಪ್ರಭುದೇವರ ಬಸವಣ್ಣನವರ ಪ್ರಶ್ನೋತ್ತರ ವಿಷಯವನ್ನು ತಾಯಿಯವರು ಬಹು ಮಾರ್ಮಿಕವಾಗಿ ಪ್ರವಚನ ನೀಡಿದರು. ಆದ್ಯಾತ್ಮ ವಿದ್ಯಾಶ್ರಮದ ಸಹೋದರಿಯರು ಶ್ರೀ ಲಲಿತಾ ಸಹಸ್ರನಾಮಾಸ್ತೋತ್ರವನ್ನು ನಡೆಸಿಕೊಟ್ಟವರು.

ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಕದಳಿ ವೇದಿಕೆಯ ಮಹಿಳಾ ಮಡಳದ ಜಿಲ್ಲಾ ಅಧ್ಯಕ್ಷರಾದ ಸುಧಾ ಹುಚ್ಚಣ್ಣವರ ಮಾತನಾಡುತ್ತಾ ನೀಲಮ್ಮತಾಯಿಯವರ ಪ್ರವಚನ ಕೇಳುವುದೇ ಒಂದು ಸುದೈವ. ನಾಡಿನ ಕೆಲವೇ ಕೆಲವು ಪ್ರವಚನಕಾರರಲ್ಲಿ ನೀಲಮ್ಮತಾಯಿಯವರು ಒಬ್ಬರು. ಮಹಿಳೆಯರು ಸನ್ಯಾಸಿಯಾಗುವುದು ಬಹಳ ಕಷ್ಟದ ಕೆಲಸ. ಅಂಥದರಲ್ಲಿ ನೀಲಮ್ಮತಾಯಿಯವರು ತಮ್ಮ ಜೀವನವನ್ನೇ ಸಮಾಜಕ್ಕೆ ಅರ್ಪಿಸಿರುವರು. ಇದೇ ತಾರೀಖು 24 ರವಿವಾರದಂದು ಗದಗ ತೋಂಟದಾರ್ಯ ಕಲ್ಯಾಣ ಕೇಂದ್ರದಲ್ಲಿ ಜಿಲ್ಲಾ ಮಟ್ಟದ ಶರಣ ಮೇಳ ನಡೆಯಲಿದ್ದು, ಬೆಳಿಗ್ಗೆ 8:30 ರಿಂದ ಸಾಯಂಕಾಲ 6:00ಗಂಟೆ ವರೆಗೆ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಒಕ್ಕಲಗೇರಿ ಓಣಿಯ ಸರ್ವ ಸದಸ್ಯರು ಭಾಗವಹಿಸಬೇಕೆಂದು ಮನವಿ ಮಾಡಿಕೊಂಡರು.

ಸಂಗೀತ ಸೇವೆಯನ್ನು ಮೃತ್ಯುಂಜಯ ಹಿರೇಮಠ ನಡೆಸಿದರು. ತಬಲಾ ವಾದಕರಾಗಿ ಹೇಮೇಂದ್ರಕುಮಾರ ಹಿರೇಮಠ ನಡೆಸಿದರು. ಎಮ್ ಎಮ್. ಹಿರೇಮಠರವರು ಕಾರ್ಯಕ್ರಮ ನಿರುಪಣೆ ಮಾಡಿದರು. ವೆದಿಕೆಯ ಮೇಲೆ ಸತ್ಸಂಗದ ಅಧ್ಯಕ್ಷರಾದ ಶ್ರೀಮತಿ ಸುನಂದಾ ಜೋಬಾಳೆ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಟ್ರಸ್ಟ್ ಕಮೀಟಿಯ ಸದಸ್ಯರಾದ ಕೊಟ್ರಪ್ಪ ಕಮತರ, ಎಂ.ಎಂ. ಹಿರೇಮಠ ವಕೀಲರು, ಶಿವಣ್ಣ ಕತ್ತಿ, ಮುರಿಗೆಪ್ಪ ನಾಲವಾಡ, ಹಿರಿಯರಾದ ವಿರುಪಾಕ್ಷಪ್ಪ ಅಕ್ಕಿ, ಬಸವರಾಜ ಜಂಪ್ಲಿ, ಬಸವರಾಜ ಮಡಿವಾಳರ, ಪುರಾಣ ಪ್ರವಚನ ಸಮಿತಿ ಅಧ್ಯಕ್ಷರಾದ ಶೇಖಪ್ಪ ಹೊಂಬಳ, ಸಿದ್ದಣ್ಣ ಅರಳಿ, ಗಂಗಾಧರ ಮೇಲಗಿರಿ, ಗಂಗಾಧರ ನಂದಿಕೋಲಮಠ, ಶ್ರಿಶೈಲಪ್ಪ ಪಟ್ಟಣಶೆಟ್ಟಿ, ಸುರೇಶ ಮಾಳವಾಡ, ಪ್ರಭು ಶೆಟ್ಟರ, ಸುಭಾಸ ಹವಳೆ, ವಿರುಪಾಕ್ಷಪ್ಪ ಅಂಗಡಿ, ಮಲ್ಲಿಕಾರ್ಜುನ ಹಿರೇಮಠ, ಶಂಕರ ನೀರಲಕೇರಿ, ಸುರೇಶ ನಿಲುಗಲ್ಲ, ಅಶೋಕ ತಮ್ಮಳ್ಳಿ, ಬಸವರಾಜ ಮೊರಬದ, ಪಂಚಾಕ್ಷರ ಅಂಗಡಿ, ನವೀನ ನಾಲ್ವಾಡ, ಬಸವರಾಜ ಜ್ಞಾಂಪೂರ, ಪ್ರಕಾಶ ಜಂಪ್ಲಿ, ಸತ್ಸಂಗದ ಸದಸ್ಯರಾದ ಸುನಂದಾ ಜೋಬಾಳೆ, ಬೀನಾ ಮಾನ್ವಿ, ಉಮಾ ಪಟ್ಟಣಶೆಟ್ಟಿ, ಜಯಶ್ರೀ ನಿಲೂಗಲ್, ನಗಪ್ಪ ಕಟಿಗೆರೆ. ಕಸ್ತೂರಕ್ಕ ಮಾನ್ವಿ, ಶರಣಮ್ಮ ಶಿರೂರ, ಸುಶೀಲಾ ನಿಲೂಗಲ್ಲ, ನೀಲಕ್ಕ ಕಗನಳ್ಳಿ, ಅನಸಕ್ಕ ಮೇಲಗಿರಿ, ಶೈಲಾ ಮಾನ್ವಿ, ಸರಸ್ವತಿ ನಂದಿಕೋಲಮಠ ಮುತಾದವರು ಭಾಗವಹಿಸಿದ್ದರು.

ಎಲ್ಲರನ್ನೂ ಗುರುತಿಸಿ ಬೆಳೆಸುವ ಪತ್ರಕರ್ತರನ್ನೂ ಗುರುತಿಸುವ ಅಗತ್ಯವಿದೆ :ಕುಂದಗೋಳ



ಮಹಾಲಿಂಗಪುರ : ಒಳಿತನ್ನು ಗುರುತಿಸಿ ಬೆಳೆಸುವ ಮತ್ತು ಕೆಡುಕನ್ನು ಖಂಡಿಸಿ ಅಳಿಸುವ ನಿಟ್ಟಿನಲ್ಲಿ ಪತ್ರಿಕೆಗಳ ಪಾತ್ರ ದೊಡ್ಡದು. ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವನ್ನು ಪತ್ರಿಕೆಗಳು ಗುರುತಿಸಿ ಬೆಳೆಸುತ್ತವೆ. ಅಂಥ ಪತ್ರಕರ್ತರನ್ನು ಗುರುತಿಸಿ ಸನ್ಮಾನಿಸುವ ಅಗತ್ಯವಿದೆ ಎಂದು ಕೆಎಲ್ಇ ಪಾಲಿಟೆಕ್ನಿಕ್ ಪ್ರಾಚಾರ್ಯ ಎಸ್.ಐ. ಕುಂದಗೋಳ ಹೇಳಿದರು.

ಸ್ಥಳೀಯ ಕೆಎಲ್ಇ ಪಾಲಿಟೆಕ್ನಿಕ್‌ನಲ್ಲಿ ಕಾನಿಪ ಸಂಘ ಮತ್ತು ಮಧುರಾ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ ದಿ.ಶಾಂತವೀರಯ್ಯ ಮನ್ನಯ್ಯನವರಮಠ ಸ್ಮರಣಾರ್ಥ–ರ್ ಸುದ್ದಿಮನೆ ಚೇತನ ಚೊಚ್ಚಲ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕ್ಷೇತ್ರದಲ್ಲಿನ ಪತ್ರಕರ್ತರ ಪರಿಚಯ ಎಲ್ಲರಿಗಿರುತ್ತದೆ. ಆದರೆ ಸುದ್ದಿಮನೆಯಲ್ಲಿ ತೆರೆಮರೆ ಹಿಂದೆ ಶ್ರಮಿಸುವ ಸಿಬ್ಬಂದಿಯನ್ನು ಗುರುತಿಸುವ ಮೂಲಕ ಮಧುರಾ ಪ್ರಕಾಶನ ಶ್ಲಾಘನೀಯ ಕಾರ್ಯ ಮಾಡಿದೆ ಎಂದರು. ಸುದ್ದಿಮನೆ ಚೇತನ ಪ್ರಶಸ್ತಿ ಸ್ವೀಕರಿಸಿದ ಹಿರಿಯ ಉಪಸಂಪಾದಕ ಈಶ್ವರ ಹನಗಂಡಿ ಮಾತನಾಡಿ, ಸುದ್ದಿಮನೆಯಲ್ಲಿ ಕೆಲಸ ಮಾಡುವ ಸಂಪಾದಕರಿಗೆ ಒತ್ತಡದೊಂದಿಗೆ ದೋಷರಹಿತ ಸುದ್ದಿ ಪ್ರಕಟಿಸುವ ಜವಾಬ್ದಾರಿಯೂ ಹೆಚ್ಚಿಗಿರುತ್ತದೆ ಎಂದರು. ಈಲ್ಲಾ ಕಾನಿಪ ಸಂಘದ ಅಧ್ಯಕ್ಷ ಆನಂದ ಧಲಬಂಜನ ಮಾತನಾಡಿ, ಸದರಿ ಪ್ರಶಸ್ತಿಯನ್ನು ಪ್ರತಿ ವರ್ಷ ಜಿಲ್ಲಾ ಕಾನಿಪ ವತಿಯಿಂದ ದತ್ತಿಯಾಗಿನೀಡುವಂತೆ ಮನವಿ ಮಾಡಿದರು. ಮಧುರಾ ಪ್ರಕಾಶನದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಪ್ರಾಸ್ತಾವಿಕ ಮಾತನಾಡಿದರು. ಮಧುರಾ ಪ್ರಕಾಶನದ ವತಿಯಿಂದ ಹುನ್ನೂ–ರಿನ ಹಿರಿಯ ಪತ್ರಕರ್ತ ಈಶ್ವರ ಶಾಂತವೀರಪ್ಪ ಹನಗಂಡಿ ಅವರಿಗೆ ನಗದು 5 ಸಾವಿರ ರೂ, ಪ್ರಶಸ್ತಿ ಫಲಕದೊಂದಿಗೆ ಸುದ್ದಿಮನೆ ಚೇತನ ಪ್ರಶಸ್ತಿ ನೀಡಲಾಯಿತು.

ಮುಧೋಳ ಪತ್ರಕರ್ತ ಎಂ.ಎಚ್.ನದಾಫ ಅವರನ್ನು ಸನ್ಮಾನಿಸಲಾಯಿತು. ಮಧುರಾ ಪ್ರಕಾಶನದ ಸಂಸ್ಥಾಪಕರಾದ ಅನಸೂಯಾ ಮನ್ನಯ್ಯನವರಮಠ, ಕೆಎಲ್ಇ ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಸಂತೋಷ ಹುದ್ದಾರ, ಕಾನಿಪ ಜಿಲ್ಲಾ ಸದಸ್ಯ ಎಸ್. ಎಸ್.ಈಶ್ವರಪ್ಪಗೋಳ, ಶ್ರೀಶೈಲಪ್ಪ ವಜ್ಜರಮಟ್ಟಿ, ಮಹಾಂತೇಶ ಮನ್ನಯ್ಯನವರಮಠ, ಪತ್ರಕರ್ತರಾದ ಜಯರಾಮ ಶೆಟ್ಟಿ, ಇಲಾಹಿ ಜಮಖಂಡಿ, ಹನೀಫ್ ಚಿಕ್ಕೋಡಿ, ನಾರಣಗೌಡ ಉತ್ತಂಗಿ, ಎಂ.ಎನ್.ನದಾಫ, ರಾಜೇಂದ್ರ ನಾವಿ ಇದ್ದರು.

ಇಂದು ಹಿಂದುಳಿದ ವರ್ಗಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ವಿದ್ಯುತ್ ಮೀಟರ್ ರೀಡರ್‌ಗಳ ಮೂಲಕ ಎಲ್ಲ ಮನೆಗಳ ಜಿಯೋ ಟ್ಯಾಗಿಂಗ್ ಕಾರ್ಯಕ್ಕೆ ಸಹಕರಿಸಿ : ಮಧುಸೂಧನ್ ಆರ್ ನಾಯ್ಕ ಮನವಿ

ಕಾರವಾರ : ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಾಳೆ ಆಗಸ್ಟ್ 23 ರಿಂದ ಪ್ರಾರಂಭಿಸುತ್ತಿದೆ, ವಿದ್ಯುತ್ ಮೀಟರ್ ರೀಡರುಗಳು ಎಲ್ಲ ಮನೆಗಳನ್ನು ಜಿಯೋಟ್ಯಾಗಿಂಗ್ ಮಾಡುವ ಕಾರ್ಯ ಪ್ರಾರಂಭಿಸಲಿದ್ದಾರೆ. ಯಾವುದೇ ಮನೆಗಳು ತಪ್ಪಿ ಹೋಗದಂತೆ ಯಶಸ್ವಿಯಾಗಿ ಸಮೀಕ್ಷೆ ಕೈಗೊಳ್ಳಲು ರಾಜ್ಯದ ಜನತೆ ಸಹಕರಿಸಬೇಕು ಎಂದು ಆಯೋಗದ ಅಧ್ಯಕ್ಷ ಮಧುಸೂಧನ್ ಆರ್ ನಾಯ್ಕ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 90 ದಿನಗಳಲ್ಲಿ ಪೂರ್ಣಗೊಳಿಸುವ ಬದ್ಧತೆಯೊಂದಿಗೆ ಹಮ್ಮಿಕೊಳ್ಳಲಾಗಿದೆ.

ಮೊದಲ ಹಂತದಲ್ಲಿ ಸಮೀಕ್ಷೆಗೆ ಸಂಬಂಧಿಸಿದ ಪೂರ್ವಭಾವಿ ಕೆಲಸಗಳಾಗಿರುವ ಮನೆ ಪಟ್ಟಿ ಮತ್ತು ಅವುಗಳ ನಕ್ಷೆ (ಮ್ಯಾಪಿಂಗ್) ಸಿದ್ಧಪಡಿಸುವ ಕಾರ್ಯವನ್ನು ಒಳಗೊಂಡಿರುತ್ತದೆ. ಅದು ರಾಜ್ಯದಾದ್ಯಂತ ಎಲ್ಲಾ ಮನೆಗಳ ಸಂಪೂರ್ಣ ಎಣಿಕೆ, ಅನುಕ್ರಮ ಸಂಖ್ಯೆಗಳನ್ನು ನೀಡುವುದು ಮತ್ತು ಮ್ಯಾಪಿಂಗ್ ಮಾಡುವ ಕೆಲಸವನ್ನು ಸಾಧ್ಯವಾಗಿಸುತ್ತದೆ. ರಾಜ್ಯದಲ್ಲಿರುವ ಎಲ್ಲಾ ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕವಿರುವುದರಿಂದ ವಾಸದ ಮನೆಗಳ ಆರ್. ಆರ್. ಮೀಟರ್ ಆದಾರದ ಮೇಲೆ ಮನೆಗಳನ್ನು ಗುರುತಿಸಿ ಅಲ್ಲಿರುವ ಜನರ ಸಮೀಕ್ಷೆ ಮಾಡುವುದರಿಂದ ಯಾವುದೇ ಮನೆಗಳು ಸಮೀಕ್ಷಾ ವ್ಯಾಪ್ತಿಯಿಂದ ತಪ್ಪಿ ಹೋಗುವುದಿಲ್ಲ.

ಇದರಿಂದ ಎರಡನೇ ಹಂತದಲ್ಲಿ ಸಮೀಕ್ಷೆಯ ಕಾರ್ಯವನ್ನು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಕಾರ್ಯಗತಗೊಳಿಸಲು ಅನುಕೂಲವಾಗುತ್ತದೆ.ಎರಡನೇಯ ಹಂತದ ಸಮೀಕ್ಷೆಯ ಕಾರ್ಯವನ್ನು ದಸರಾ ರಜೆಯ ಅವಧಿಯಲ್ಲಿ 22 ನೇ ಸೆಪ್ಟೆಂಬರ್ ನಿಂದ 7 ನೇ ಅಕ್ಟೋಬರ್ 2025 ರವರೆಗೆ ನಡೆಸಲು ಗುರಿ ಹೊಂದಲಾಗಿದೆ. ಈ ಸಮಯದಲ್ಲಿ ಶಾಲಾ ರಜಾದಿನಗಳು ಇರುವುದರಿಂದ ಸಮೀಕ್ಷೆ ಕಾರ್ಯಕ್ಕೆ ಪೂರಕವಾಗುತ್ತದೆ.

ಇ–ಆಡಳಿತ ಮತ್ತು ಇಂಧನ ಇಲಾಖೆಗಳು ವಿದ್ಯುಚ್ಛಕ್ತಿ ಮೀಟರ್ ಸಂಪರ್ಕದ (ಆರ್.ಆರ್. ನಂಬರ್) ಆಧಾರದ ಮೇಲೆ ವಿನ್ಯಾಸಗೊಳಿಸಿದ ಈ ನವೀನ, ಕ್ರಿಯಾತ್ಮಕ ಮತ್ತು ವಿಶಿಷ್ಟ ವ್ಯವಸ್ಥೆಯು ಉತ್ತಮವಾಗಿದೆ. ಅದಕ್ಕನುಗುಣವಾಗಿ ಒಂದು ಅಗತ್ಯವಾದ 'ಆ?ಯಪ್' ಅಭಿವೃದ್ಧಿಪಡಿಸಲಾಗಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರು ಸೇರಿದಂತೆ, ಆಯೋಗದ ಇಂಧನ ಇಲಾಖೆಯ, ಇ.ಡಿ.ಸಿ.ಎಸ್ ಸಂಸ್ಥೆಯ ಉತ್ಸಾಹಿ ಹಾಗೂ ಸೃಜನಶೀಲ ಸಲಹಾ ತಂಡದ ಸಹಕಾರದೊಂದಿಗೆ ಈ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಲಾಗಿದೆ. ಸಮೀಕ್ಷೆಯ ಕಾರ್ಯವನ್ನು ತ್ವರಿತವಾಗಿ ಪ್ರಾರಂಭಿಸಲು ಸಹಾಯ ಮಾಡುತ್ತದೆ.

ಇದು ರಾಜ್ಯದಾದ್ಯಂತ ಇರುವ ಇಂಧನ ಇಲಾಖೆಯ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ (ಇಖಅಔಬ) ಗಳ ಅಪಾರ ಸಂಖ್ಯೆಯ 'ಮೀಟರ್ ರೀಡರ್' (ಒಜಿಣಜಡಿ ಖಿಜಚಿಜ–ಜಢಿ) ಗಳನ್ನು ಒಳಗೊಂಡಿರುತ್ತದೆ. ಕರ್ನಾಟಕ ರಾಜ್ಯವು ಎಲ್ಲಾ ಮನೆಗಳನ್ನು ವಿದ್ಯುದ್ದೀಕರಣ ಗೊಳಿಸುವುದರಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂಬುದು ಹೆಮ್ಮೆಯ ವಿಷಯವಾಗಿರುವುದರಿಂದ ಎಸ್ಕಾಂಗಳ ಮೀಟರ್ ರೀಡರ್ ಗಳು, ಗ್ರಾಹಕರ ಮನೆ ಬಳಕೆ ವಿದ್ಯುತ್ ಸಂಪರ್ಕದ ಮೀಟರ್ ಅನ್ನು ಓದುವುದು ಮತ್ತು ಬಿಲಿಂಗ್ ಮಾಡುವುದರ ಜೊತೆಗೆ ಮನೆಗಳನ್ನು 'ಜಿಯೋ ಟ್ಯಾಗ್' ಮಾಡಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವ್ಯಾಪ್ತಿಗೆ ಒಳಪಟಿಸುತ್ತಾರೆ.

ಮೀಟರ್ ರೀಡರ್ ಗಳು ಸೆರೆಹಿಡಿದ ಮನೆ ಪಟ್ಟಿ ಡೇಟಾವನ್ನು ಇಆಅಖ (ನಾಗರಿಕ ಸೇವೆಗಳ ಎಲೆಕ್ಟ್ರಾನಿಕ್ ವಿತರಣೆ) ನ ಸರ್ವರ್? ಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ನಂತರ ದ್ವಿತೀಯ ದತ್ತಾಂಶಗಳನ್ನು ಆಧರಿಸಿ, ಮೌಲೀಕರಿಸಿದ ನಂತರ 'ಮನೆ ಪಟ್ಟಿ' ಸಮೀಕ್ಷೆಯ ಉದ್ದೇಶಕ್ಕಾಗಿ 'ಮ್ಯಾಪಿಂಗ್' ಮಾಡಲಾಗುತ್ತದೆ. ಅಭಿವೃದ್ಧಿಪಡಿಸಲಾದ ಅಪ್ಲಿಕೇಶನ್ ನಲ್ಲಿ ಮನೆಯ 'ಸ್ಥಳ' **(Location)** ವನ್ನು ಸೆರೆಹಿಡಿಯಲಾಗುತ್ತದೆ ಮತ್ತು ಪ್ರತಿ ಮನೆಗಳಿಗೆ 'ವಿಶಿಷ್ಟ್ಯ **(Unique Number)** ಸಂಖ್ಯೆಯನ್ನು' ನೀಡಲಾಗುತ್ತದೆ. [ಅಪಾರ್ಟ್ ಮೆಂಟ್ ಗಳು / ವಾಸಸ್ಥಳಗಳ ಕ್ಲಸ್ಟರ್ ಸೇರಿದಂತೆ]

ತಮ್ಮ 'ಬಿಲ್ಲಿಂಗ್ ಸೈಕಲ್'ನಲ್ಲಿ ಮೀಟರ್ ರೀಡರ್ ಗಳು ಆಗಸ್ಟ್ 23, 2025 ರಿಂದ ಸದರಿ ಕೆಲಸವನ್ನು ಪ್ರಾರಂಭಿಸುತ್ತಾರೆ ಮತ್ತು ಅಭಿವೃದ್ಧಿ ಪಡಿಸಲಾದ ಆ?ಯಪ್ ನಲ್ಲಿ ದಾಖಲಿಸುತ್ತಾರೆ. ಇದಾದ ನಂತರ ಪ್ರತಿ ಮನೆಗೂ ಸ್ಟಿಕ್ಕರ್ ಅಂಟಿಸಿ ಸಮೀಕ್ಷಾದಾರರಿಗೆ ಮನೆಯ ಗುರುತಿಸುವಿಕೆ ಸುಲಭವಾಗುವಂತೆ ಮಾಡುತ್ತಾರೆ.

ಪ್ರಸ್ತಾವಿತ ಸಮೀಕ್ಷೆಯು ಹಿಂದುಳಿದ ವರ್ಗಗಳು ಮತ್ತು ಇತರ ಎಲ್ಲಾ ಜನರ 'ದತ್ತಾಂಶಗಳನ್ನು ಸೆರೆಹಿಡಿಯುವುದು' ಮಾತ್ರವಲ್ಲದೆ, ಅಂದಾಜು 7 ಕೋಟಿ ಜನರಿಗೆ ಸರ್ಕಾರಿ ಇಲಾಖೆಗಳಿಂದ ಪ್ರಾರಂಭಿಸಲಾಗಿರುವ ಹಾಗೂ ಮುಂದೆ ಪ್ರಾರಂಭಿಸಲಿರುವ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಳಸಬಹುದಾದ ಉಪಯುಕ್ತ ದತ್ತಾಂಶವಾಗಲಿದೆ.

ಮನೆ ಪಟ್ಟಿ ಕಾರ್ಯಾಚರಣೆಗಳ ಈ ಮೊದಲ ಹಂತವು ತುಂಬಾ ಸವಾಲಿನದ್ದಾಗಿದ್ದರೂ ರಾಜ್ಯದ ಎಲ್ಲಾ ಮನೆಗಳನ್ನು ಒಳಗೊಂ